ಗಳನ್ನೂ ತರುತ್ತದೆ. ಒಂದು ಶಾಸನವಮಾಡಿ, ಎಲ್ಲಾ ದೇವಸ್ಥಾನಗಳಿಗೂ ಮತ್ತು ಮಠ ಮಾನ್ಯಗಳಿಗೂ ಸಂಬಂಧಪಟ್ಟ ಇನಾಮ್‌ಗಳನ್ನು ಮಾತ್ರ ಸರ್ಕಾರ ತೆಗೆದುಕೊಂಡು ಬಾಕಿ ವಿಷಯಗಳಲ್ಲಿ ವ್ಯಕ್ತಿಗಳಿಗೆ ಸಂಬಂಧಪಟ್ಟ ಪರ್ಸನಲ್ ಇನಾಮ್ ಕಾನೂನಿನಲ್ಲಿ ಏನಿದೆಯೋ ಅದರಂತೆ ಇದಕ್ಕೂ ಅನ್ವಯಿಸುವುದರಲ್ಲಿ ಏನು ತೊಂದರೆ ಇದೆಯೋ ಗೊತ್ತಿಲ್ಲ.

Sri Kadidal MANJAPPA.—Sir, may I know from the Hon'ble Member whether that was the recommendation of the Land Reforms Committee of which my friend was a member ?

Sri H. M. CHANNABASAPPA.—I am fully aware of the recommendations of the Land Reforms Committee. The main object of that Committee was to abolish Inam tenures. That was the main recommendation of that Committee. It did not want Government to take this trouble in bringing about this uniform policy of land reform.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸ್ವಾಮಿ, ಆ ಭೂ ಸುಧಾರಣಾ ಸಮಿತಿಯವರು ಮಾಡಿರತಕ್ಕ ವರದಿಯನ್ನು ನಾನು ಇಲ್ಲಿ ತಂದಿದ್ದೇನೆ. ಆ ಸಮಿತಿಯಲ್ಲಿ ಇವರೂ ಸದಸ್ಯರಾಗಿದ್ದರು. ಅವರು ಏನು ಶಿಫಾರಸು ಮಾಡಿದ್ದಾರೆಂಬುದನ್ನು ಓದುತ್ತೇನೆ. ಒಂದೆರಡು ವಾಕ್ಯಗಳನ್ನು ಮಾತ್ರ . . . .

Sri H. M. CHANNABASAPPA.—I am not yielding to the Hon'ble Member at all.

Sri S. SRINIVASA IYENGAR.—It is relevant, Sir. He is now speaking against the recommendations he has made already.

Mr. SPEAKER.—Let him go on. You can reply to him later.

Sri S. SRINIVASA IYENGAR.—I rise to a point of order, Sir. Can he put forth before this Assembly exactly opposite views to the views he has already put in that report ?

Mr. SPEAKER.—There is no point of order. Because, this is a report outside the scope of this legislation. The members of a Select Committee have got a right to change their views. Moreover, the recommendations of that Committee were submitted long back. That is not binding on this House. He has got a right to speak as he likes now. It may not be proper, but it is not illegal.

Sri S. SRINIVASA IYENGAR.—May I submit, Sir, that such a recommendation has not been made by the Land Reforms Committee ? I want to bring to the notice of this House the recommendations of that Select Committee. May I read it, Sir ?

Sri H. M. CHANNABASAPPA.—Is there a point of order, Mr. Chairman ? If not, I am not yielding to the Hon'ble Member.

Mr. SPEAKER.—He is not yielding, You may read it when the chance comes to you.

Sri S. SRINIVASA IYENGAR.—I bow to the Chair, Sir.

Mr. SPEAKER.—Let him go on. You will have a chance to reply.

ಶ್ರೀ ಎಚ್. ಎಂ. ಚನ್ನಬಸಪ್ಪ.—ಭೂ ಸುಧಾರಣಾ ಸಮಿತಿಯವರು ಮಾಡಿರುವ ಮೂಲ ಶಿಫಾರಸು ಭೂ ಸ್ವಾಮ್ಯ ದೇಶಾದ್ಯಂತ ಒಂದೇರೀತಿ ಇರಬೇಕೆಂಬುದು ಮತ್ತು ಮಧ್ಯವರ್ತಿ ಜನರಾದ ಇನಾಮ್ ದಾರರ ಹಕ್ಕನ್ನು ಸರ್ಕಾರ ತೆಗೆದುಕೊಂಡುಬಿಡಬೇಕು, ಹೀಗೆ ತೆಗೆದುಕೊಂಡು ಈ ಏರ್ಪಾಡು ಎಲ್ಲಾ ಕಡೆಯೂ ಒಂದೇರೀತಿ ಇರುವಂತೆ ಮಾಡಬೇಕೆಂಬುದು ಮೂಲ ಉದ್ದೇಶ. ಆ ಉದ್ದೇಶ ಇದರಲ್ಲಿ ಸಫಲವಾಗುತ್ತದೆಯೆ ಎಂಬುದನ್ನು ನೋಡಬೇಕು. ಈಗ ದೇವಸ್ಥಾನಗಳು ಮತ್ತು ಮಠ ಮಾನ್ಯಗಳು ಇವುಗಳಲ್ಲಿರುವ ಹಕ್ಕನ್ನು ತೆಗೆದುಕೊಂಡು ಇವುಗಳಿಗೆ ಪರಿಹಾರವನ್ನು ಕೊಟ್ಟರೆ, ಆಗ ಭೂಸ್ವಾಮ್ಯ ಸರ್ಕಾರಕ್ಕಿರುತ್ತದೆ. ಇದನ್ನು ಮುಂದೆ ಯಾವರೀತಿ ವ್ಯವಸ್ಥೆ ಮಾಡಬೇಕೆಂಬುದು ಸರ್ಕಾರಕ್ಕೆ ಸೇರಿದ್ದು. ಅದನ್ನು ಬಿಟ್ಟು ಆ ಹಕ್ಕನ್ನು ತೆಗೆದುಕೊಳ್ಳುವುದರ ಜೊತೆಗೆ . .

Sri Kadidal MANJAPPA.—I am sorry that the Hon'ble Member is pleading contrary to his own recommendations made by him in the Land Reforms Committee.

Sri H. M. CHANNABASAPPA.—The Hon'ble Minister has a chance to reply. I do not know why he is in a hurry.

Sri Kadidal MANJAPPA.—I want to help you.

Sri H. M. CHANNABASAPPA.—I would like to hear the Hon'ble Minister. I am fully conscious of the recommendations we have made in the Land Reforms Committee Report. The Hon'ble Minister may also know that as time changes in these days of democracy when new ideas and new ideologies are coming up we have to develop new ideas. In 1949, the present socialistic pattern of society had not come to the forefront. May I bring it to him that today the socialistic pattern of society is the aim of the Government ? In a changing world of this kind, when ideas are changing, nothing prevents me to change my views.

A. MEMBER.—If it is a sign of progress?

Sri H. M. CHANNABASAPPA.—Of course, it is a sign of progress. Nothing prevents me to adopt myself and my views to the growing changes in the country. (*Interruption.*)

Mr. SPEAKER.—You can go on.

ಶ್ರೀ ಎಚ್. ಎಂ. ಚನ್ನಬಸಪ್ಪ.—ಗ್ರಾಮಾಂತರಗಳಲ್ಲಿ ಸಾವಿರಾರು ದೇವಸ್ಥಾನಗಳಿವೆ. ಈ ದೇವಸ್ಥಾನಗಳು ಈಗಿರುವ ರೀತಿಯಲ್ಲಿ ಕೆಲಸ ಮಾಡಿಕೊಂಡು, ಸಮರ್ಪಕವಾಗಿ ಕೆಲಸ ಮಾಡಿಕೊಂಡು ದೇಶದಲ್ಲಿರುವ ದೈವಭಕ್ತಿಯನ್ನು ಕಾಪಾಡಿಕೊಂಡು ಹೋಗಬೇಕಾದರೆ ಕೆಲವು ವ್ಯವಸ್ಥೆಗಳು ಬೇಕು. ಈ ವ್ಯವಸ್ಥೆಗಳನ್ನು ಅವ್ಯವಸ್ಥೆ ಮಾಡತಕ್ಕ ಯಾವುದಾದರೂ ಶಾಸನ ಬಂದಲ್ಲಿ ಅದನ್ನು ತಡೆಕಟ್ಟುವುದು ನಮ್ಮ ಕರ್ತವ್ಯ. ದೇವಸ್ಥಾನಗಳು ದೇಶದಲ್ಲಿ ಸಂರೋದ್ಧಾರವಾಗಿ ನಡೆದುಕೊಂಡು ಹೋಗಬೇಕೇ ಬೇಡವೇ ಎನ್ನುವುದನ್ನು ಮೊದಲು ತೀರ್ಮಾನ ಮಾಡಬೇಕು. ಹಳ್ಳಿಗಳಲ್ಲಿ ಅರ್ಚಕರಿಗೆ ತಿಂಗಳಿಗೆ ನಾಲ್ಕೈದು ರೂಪಾಯಿ ಸಂಬಳ ಕೊಟ್ಟರೆ ಯಾರೂ ದೇವಸ್ಥಾನಗಳಲ್ಲಿ ಪೂಜೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ದೇವಸ್ಥಾನಕ್ಕೆ ಸಂಬಂಧಪಟ್ಟ ಭೂಮಿಯನ್ನು ಅರ್ಚಕನು ವ್ಯವಸಾಯ ಮಾಡಿಕೊಂಡು ದೇವರ ಪೂಜೆಯನ್ನು ಸಮರ್ಪಕವಾಗಿ ಮಾಡಿಕೊಂಡು ಅಲ್ಲಿನ ಜನರ ಪ್ರೀತಿ ವಿಶ್ವಾಸಗಳನ್ನು ಉಳಿಸಿಕೊಂಡು ಹೋಗುತ್ತಾನೆ. ಯಾವಾಗ ಅವನು ಜನರಿಗೆ ಸರಿಹೋಗುವುದಿಲ್ಲವೋ ಆಗ ಅವನನ್ನು ತೆಗೆದುಹಾಕಿ ಬೇರೆಯವನನ್ನು ನೇಮಿಸಿ ಪೂಜೆ ಸರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡುತ್ತಾರೆ. ಈಗ ಈ ಮಸೂದೆಯಲ್ಲಿ ಮಾಡಿರುವುದು ಹೇಗೆಂದರೆ, ದೇವಸ್ಥಾನದಿಂದ ಜಮೀನನ್ನು ತೆಗೆದುಕೊಂಡು ಅರ್ಚಕನಿಗೆ ಕೊಟ್ಟರೆ ಅವನು ಪೂಜೆ ಮಾಡುತ್ತಾನೆ. ಇನ್ನು ಮುಂದೆ ಇವನು ಸರ್ಕಾರದ ರೈತ ಅಥವಾ ಟೆನೆಂಟ್ ಆಗಿ ಪೂಜೆ ಮಾಡುತ್ತಾನೆ, ದೇವಸ್ಥಾನದ ಟೆನೆಂಟ್ ಆಗಿರುವುದಿಲ್ಲ. ಹೀಗೆ ಮಾಡದೆ, ಒಂದು ವೇಳೆ ಜಮೀನನ್ನು ದೇವಸ್ಥಾನದ ಹೆಸರಿನಲ್ಲೇ ರಿಜಿಸ್ಟರ್ ಮಾಡುವುದರಲ್ಲಿ ಸರ್ಕಾರಕ್ಕೇನು ತೊಂದರೆಯೋ ಗೊತ್ತಿಲ್ಲ. ಸಂಸ್ಥಾನದಲ್ಲಿ 9,599 ಸಂಸ್ಥೆಗಳಿವೆ. ಇಷ್ಟು ದೇವಸ್ಥಾನ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನುಗಳನ್ನು ತೆಗೆದುಕೊಂಡು, ಸರ್ಕಾರ ದೊಡ್ಡ ಜಹಗೀರ್ದಾರನಾಗಿ, ಈ ಜಮೀನನ್ನು ವಾರ, ಗುತ್ತಿಗೆಗೆ ಕೊಟ್ಟು, ಲೆಕ್ಕ ಇಟ್ಟುಕೊಂಡು, ಅದರಿಂದ ಬರುವ ಉತ್ಪತ್ತಿಯನ್ನು ಮಾರಾಟ ಮಾಡಿ ಆ ದೇವಸ್ಥಾನಗಳಲ್ಲಿ ಪೂಜೆ ನಡೆಸುವ ಮಹತ್ತರ ಜವಾಬ್ದಾರಿಯನ್ನು ಏಕೆ ಹೊತ್ತುಕೊಳ್ಳಬೇಕೆಂಬುದನ್ನು ಮಾನ್ಯ ಮಂತ್ರಿಗಳು ಅವರ ಪ್ರಾರಂಭ ಭಾಷಣದಲ್ಲಿ ಸೂಚನೆ ಮಾಡಲಿಲ್ಲ. ಈಗ ಏನು ತೊಂದರೆ ಇದೆ? ಇನಾಮ್ ಹಕ್ಕನ್ನು ರದ್ದು ಮಾಡಬೇಕು, ಆ ಹಕ್ಕನ್ನು ಸರ್ಕಾರ ತೆಗೆದುಕೊಳ್ಳಬೇಕು. ಈ ಹಕ್ಕನ್ನು ರದ್ದು ಮಾಡೋಣ. ಆದರೆ ಸರ್ಕಾರ ರಿಜಿಸ್ಟರ್ಡ್ ಆಕ್ಯುಪೆಂಟ್ ಆಗುವುದಕ್ಕೆ ಬದಲು ದೇವಸ್ಥಾನವನ್ನು ಮಾಡಿ, ಆಯಾ ಜಮೀನನ್ನು ಅವುಗಳ ಹೆಸರಿನಲ್ಲಿಟ್ಟು, ಸರ್ಕಾರದವರು ಕಂದಾಯ ತೆಗೆದುಕೊಳ್ಳುವುದರಲ್ಲಿ ತೊಂದರೆ ಏನು?

(*Interruption*).

Mr. SPEAKER.—The Hon'ble Member has no right to indulge in side talks.

Sri H. M. CHANNABASAPPA.—I am addressing him only through you, Sir. ಆದುದರಿಂದ, 'ರಿಜಿಸ್ಟರ್ಡ್ ಆಕ್ಯುಪೆಂಟ್' ಸರ್ಕಾರ ಆಗುವುದಕ್ಕೆ ಬದಲು ಜಮೀನನ್ನು ದೇವಸ್ಥಾನಗಳ ಹೆಸರಿನಲ್ಲೇ ರಿಜಿಸ್ಟರ್ ಮಾಡಿ, ಕಂದಾಯವನ್ನು ಸರ್ಕಾರ ತೆಗೆದುಕೊಂಡರೆ, ಯಾವ ಮನುಷ್ಯ ಪೂಜೆ ಮಾಡುತ್ತಾನೋ ಅವನು ಕಂದಾಯ ಕೊಟ್ಟುಕೊಂಡು ಆ ಜಮೀನನ್ನು ವ್ಯವಸಾಯ ಮಾಡಿಕೊಂಡು ಪೂಜೆ ನಡೆಸುತ್ತಾನೆ. ಯಾವಾಗ ಪ್ರಜೆಗಳಿಗೆ ಇಷ್ಟವಿಲ್ಲವೋ ಆಗ ಬೇರೆ ಏರ್ಪಾಡು ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ. ಹೀಗಿಲ್ಲದೆ, ಯಾವಾಗ ಜಮೀನನ್ನು ಅರ್ಚಕ ತಾನೇ ಸ್ವಂತ ಮಾಡಿಕೊಳ್ಳಬೇಕೆಂದು ಈ ಕಾನೂನಿನ ಪ್ರಕಾರ ನಿಗದಿಯಾದ ಹಣವನ್ನು ಕೊಡುತ್ತಾನೋ ಆಗ ಅದು ಅವನದಾಗುತ್ತದೆ. ಇನ್ನು ಮುಂದೆ ಪೂಜೆ ಮಾಡುವವನಿಗೂ ಸರ್ಕಾರಕ್ಕೂ ದೇವಸ್ಥಾನಕ್ಕೂ ಸಂಬಂಧ ತಪ್ಪಿ ಹೋಗುತ್ತದೆ. ಬೇರೆಯವನನ್ನು ಏರ್ಪಾಡು ಮಾಡಿ ಅವನಿಗೆ ಸಂಬಳ ಕೊಟ್ಟು ಪೂಜೆ ಮಾಡುವಹಾಗೆ ಮಾಡುವುದು ಕಷ್ಟವಾಗುತ್ತದೆ. ಈ ಕಾನೂನು ಜಾರಿಗೆ ಬಂದಮೇಲೆ ದೇಶಾದ್ಯಂತ ಇರತಕ್ಕ ಇಂಥ ಎಲ್ಲ ಜಮೀನುಗಳಿಗೂ ಅರ್ಚಕರು ಅರ್ಜಿ ಹಾಕಿ, ಹಣ ಕೊಟ್ಟು ಜಮೀನಿನ ಮಾಲೀಕರಾಗುತ್ತಾರೆ. ದೇವಸ್ಥಾನದಲ್ಲಿ ಪೂಜೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆಗ ಸಂಬಳ ಕೊಟ್ಟು ಸಾವಿರಾರು ದೇವಸ್ಥಾನಗಳಲ್ಲಿ ಪೂಜೆ ಏರ್ಪಾಡು ಮಾಡುತ್ತೇವೆಂದರೆ, ಅದು ಬರಿಯ ಭ್ರಾಂತಿಯ ಮಾತು.

ಆದುದರಿಂದ ಮೊದಲು ದೇವಸ್ಥಾನಗಳು ಹಳ್ಳಿಗಾಡಿನಲ್ಲಿರಬೇಕೇ ಬೇಡವೇ ಎಂಬುದನ್ನು ತೀರ್ಮಾನ ಮಾಡಿದರೆ ಈ ಶಾಸನವನ್ನು ತೀರ್ಮಾನ ಮಾಡುವುದಕ್ಕನುಕೂಲವಾಗುತ್ತದೆ. ದೇವಸ್ಥಾನ ಬೇಡ ಎಂದರೆ, ಖಂಡಿತವಾಗಿ ನಾವು ಈ ಮಸೂದೆಯನ್ನೊಪ್ಪಿಕೊಳ್ಳಬಹುದು. ಎಲ್ಲೆಲ್ಲಿ ದೇವಸ್ಥಾನಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲವೋ, ಪೂಜೆ ಖೋತಾ ಆಗಿದೆಯೋ ಅಲ್ಲಿ ಹೋಗಬೇಕಾದುದೇನೋ ಸರಿ. ಸಂಸ್ಥಾನದಲ್ಲಿ 9,594 ಇಂಥ ಸಂಸ್ಥೆಗಳು ನಡೆಯುತ್ತಿವೆ ಎಂದು ಹೇಳಿದರು. ಇವುಗಳು ಉಳಿಯಬೇಕೆಂದು ಇಷ್ಟವಿದ್ದರೆ, ಈಗಿರತಕ್ಕ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಿ ಜಮೀನಿನ ಮೇಲಿರತಕ್ಕ ಇನಾಮ್ ಹಕ್ಕನ್ನು ಮಾತ್ರ ತೆಗೆದುಕೊಂಡು, ದೇವಸ್ಥಾನಗಳನ್ನು 'ರಿಜಿಸ್ಟರ್ಡ್ ಆಕ್ಯುಪೆಂಟ್' ಮಾಡಿ, ಆ ಜಮೀನಿನ ಮುಂಚಿನ ಅರ್ಚಕನನ್ನು ಏರ್ಪಾಡು ಮಾಡುವುದು ಬಹಳ ಸೂಕ್ತ. ಹಾಗಿಲ್ಲದೆ ತಸ್ತಿಕ್ ಕೊಡುವ ಏರ್ಪಾಡನ್ನು ಮಾಡಿದರೆ, ಸಂಸ್ಥೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯ ವರೆಗೂ ಈ ತಸ್ತಿಕ್ ಮೊಬಲಗನ್ನು ಸರ್ಕಾರದ ಬೊಕ್ಕಸದಿಂದ ಕೊಡುವುದೆಂದರೆ, ಇದು ಸರಿಯಾದ ಆರ್ಥಿಕ ನೀತಿಯೆ ಎನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ.

2 P.M.

ಸರ್ಕಾರದಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಯಾವ ರೀತಿ ಪ್ರತಿ ತಿಂಗಳೂ ಸಂಬಳವನ್ನು ಬೊಕ್ಕಸದಿಂದ ಕೊಡುತ್ತಿದ್ದಾರೋ ಅದೇ ಪದ್ಧತಿಯನ್ನು ಅನುಸರಿಸಿ 10 ಸಾವಿರ ಜನ ಅರ್ಚಕರಿಗೂ ತಸ್ತೀಕನ್ನು

ಸರ್ಕಾರದ ಬೊಕ್ಕಸದಿಂದ ಕೊಡುವ ವ್ಯವಸ್ಥೆ ಮಾಡಬೇಕಾಗುತ್ತದೆ. ಆದರೆ ಸರ್ಕಾರದವರು ಬೇರೆಕಡೆಯಿಂದ ಈ ಬಾಬಿನಲ್ಲಿ ಉತ್ಪತ್ತಿ ಪಡೆಯುತ್ತಾರೆ. ಅದರಿಂದ ಕೊಡುತ್ತಿದ್ದಾರೆಂದು ಹೇಳಬಹುದು. ಆದರೆ ನಾನು ಹೇಳುವುದು "Tenants-at-will" ಯಾರು ಯಾರು ಆಗಿದ್ದಾರೋ ಅವರು ಕಾನೂನು ಪ್ರಕಾರ ವಿಧಾಯಕ ಮಾಡಿದ ಹಣ ಕೊಟ್ಟರೆ ಅವರಿಗೆ ಭೂಮಿ ಯಜಮಾನನಾಗುವ ಹಕ್ಕು ಬರುತ್ತದೆ. ಇಲ್ಲದಿದ್ದರೆ ಈ ಹಕ್ಕು ಪಡೆಯುವುದಕ್ಕೆ ಅವರಿಗೆ ಸಾಧ್ಯವಿದೆಯೇ? ಇದರಿಂದ ಗ್ರಾಮಾಂತರಗಳಲ್ಲಿ ಜಮೀನನ್ನು ಅವಲಂಬಿಸಿಕೊಂಡು ಜಮೀನು ಇಲ್ಲದೆ ವ್ಯವಸಾಯಮಾಡಿಕೊಂಡು ಹೋಗುವುದಕ್ಕೆ ಸಿದ್ಧನಾಗಿರುವವನು ಯಾವನು ಇದ್ದಾನೋ ಅವನಿಗೋಸ್ಕರ ಈ ಭೂಸುಧಾರಣೆಯನು ಮಾಡುತ್ತೇವೆ ಎಂಬ ಉದ್ದೇಶ ಸಾಧನೆಮಾಡಿದಂತಾಗುತ್ತದೆಯೇ? ಪೂಜೆ ಮಾಡುವುದಕ್ಕೆ ಇರುವ ಮನುಷನು ಜಮೀನ್‌ದಾರನಾಗುವುದಿಲ್ಲ. ಆದ್ದರಿಂದ ಜಮೀನು ಇಲ್ಲದೆ ಇರುವ ಮನುಷ್ಯನು ಪೂಜೆ ಮಾಡುವುದಕ್ಕೆ ಒಪ್ಪಿಕೊಂಡರೆ ಉಳುವವನಿಗೆ ಹೊಲ ಇರಬೇಕು ಎನ್ನುವ ಅಭಿಪ್ರಾಯಕ್ಕೆ ಮನ್ನಣೆಕೊಟ್ಟಂತಾಗುತ್ತದೆಯೆ? ಆದ್ದರಿಂದ ದೇವರು registered occupant ಆದರೆ ಅದರ ಸ್ವಾಮ್ಯ ಅಂದರೆ ಹೆಚ್ಚು ಕಡಿಮೆ ಭೂಮಿಯನ್ನು ಹೊಂದಿಕೊಂಡುಹೋಗತಕ್ಕಂಥ ಹಕ್ಕು ಅರ್ಚಕನಿಗೆ ಬರುತ್ತದೆ. ಶೃಂಗೇರಿ ಜಹಗೀರಿಯ ವಿಷಯದಲ್ಲಿ ಒಂದು ಪ್ರತ್ಯೇಕ ಅಭಿಪ್ರಾಯವನ್ನು (dissenting note) ಶ್ರೀ ಪಿ. ಆರ್. ರಾಮಯ್ಯನವರು ಕೊಟ್ಟಿದ್ದಾರೆ. ಅವರು ಹೇಳಿದಹಾಗೆ ನಾವು ಇನಾಮು ಹಕ್ಕನ್ನು ತೆಗೆದುಕೊಳ್ಳೋಣ. ಹಾಗೆ ಇನಾಮು ಹಕ್ಕನ್ನು ತೆಗೆದುಕೊಳ್ಳುವಾಗ ಅದಕ್ಕೆ ಆಗತಕ್ಕಂಥ ಮೊಬಲಗನ್ನು ಆ ಇನಾಮುದಾರನಿಗೆ ಕೊಡೋಣ. Charitable ಮತ್ತು Religious ಇನ್‌ಸ್ಟಿಟ್ಯೂಷನ್‌ಗಳಿಗೆ ಒಂದು ಫಂಡು ಮಾಡಿ ವ್ಯವಸ್ಥಿತವಾದ ಕಾರ್ಯಕ್ರಮ ನಡೆಸಿಕೊಂಡು ಹೋಗುವುದಕ್ಕೆ ಏನು ಬೇಕೋ ಅದನ್ನು ಮಾಡೋಣ. ಈ ಬಿಲ್ಲಿನ 28ನೇ ಸೆಕ್ಷನ್ "confirment of rights in certain lands on Inamdars" ಎಂದು ಹೇಳಿದ್ದಾರೆ. ಇದು ಮೂಲತತ್ವಕ್ಕೆ ವಿರೋಧವಾಗುತ್ತದೆ. ಮಧ್ಯವರ್ತಿಗಳನ್ನು ನಾವು ತಪ್ಪಿಸಿಬಿಟ್ಟು ಭೂಸ್ವಾಮ್ಯವನ್ನು ಸರಕಾರ ತೆಗೆದುಕೊಳ್ಳಬೇಕೆಂದಿರುವಾಗ ಸರ್ಕಾರದವರು ಇನಾಮುದಾರರಿಗೆ ವಿಶೇಷ ಹಕ್ಕುಗಳನ್ನು ವಿಶೇಷ ಕಾರಣಗಳಿಗೋಸ್ಕರ ವಿಶೇಷ ಸಂದರ್ಭಗಳಲ್ಲಿ ಕೊಡಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ Section 28 ನಮ್ಮ ಮೂಲತತ್ವಕ್ಕೆ ಕೂಡ ವಿರೋಧವಾಗುತ್ತದೆ. ಆದ್ದರಿಂದ ಇಲ್ಲಿ ಅನೇಕ ವಿಷಯಗಳು ನಮ್ಮ ಮೂಲ ಅಭಿಪ್ರಾಯಕ್ಕೆ ವಿರೋಧವಾಗಿರುವುದರಿಂದ ಈ ಸೆಲೆಕ್ಟ್ ಕಮಿಟಿಯವರ ರಿಪೋರ್ಟ್ ಪರಿಶೀಲನೆ ಮಾಡಬೇಕಾಗಿದೆ. ಮತ್ತು ಈ ವಿಷಯದಲ್ಲಿ ಪ್ರಜಾಭಿಪ್ರಾಯವನ್ನೂ ಕೂಡ ಪಡೆಯತಕ್ಕದ್ದು ಅವಶ್ಯಕವಾಗಿದೆ ಎಂದು ಹೇಳುತ್ತೇನೆ. ಇದು ನನಗೆ ಸಂಬಂಧಪಟ್ಟ ವಿಷಯವಲ್ಲ. ಇಡಿ ದೇಶದ ನಾನಾ ಕಡೆಗಳಲ್ಲಿ ಇರತಕ್ಕ ದೇವಸ್ಥಾನಗಳ ಪೂಜೆಪುನಸ್ಕಾರಗಳ ವ್ಯವಸ್ಥೆಗೆ ಸಂಬಂಧಪಟ್ಟಿದೆ. ಜನಜೀವನದಮೇಲೆ ಇದು ಅತ್ಯಂತ ಪರಿಣಾಮವನ್ನುಂಟುಮಾಡುವುದರಿಂದ ಈ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ಪುನಃ ಪ್ರಜಾಭಿಪ್ರಾಯಕ್ಕಾಗಿ circulate ಮಾಡಬೇಕಾದ ಅವಶ್ಯಕತೆ ಇದೆಯೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರುವ Religious ಮತ್ತು Charitable ಇನಾಮುಗಳ ಬಿಲ್ಲಿನ ಸೆಲೆಕ್ಟ್ ಕಮಿಟಿಯ ವರದಿಯನ್ನು ನಾವು ಪರಿಶೀಲನೆ ಮಾಡುವಾಗ ಈ ಸಭೆಯ ಮಾನ್ಯ ಸದಸ್ಯರುಗಳು ಹಿಂದೆ ನಡೆದ ಚರ್ಚೆಯನ್ನು ಅಥವಾ ಅವರು ಮಾಡಿದಂಥ ಭಾಷಣವನ್ನು ಮರೆತು, ಅವರು ಏನು ಹಿಂದೆ ಈ ವಿಷಯದಲ್ಲಿ ಅಭಿಪ್ರಾಯಗಳನ್ನು ಕೊಟ್ಟಿದ್ದಾರೋ ಅವುಗಳನ್ನೇ ಸೆಲೆಕ್ಟ್ ಸಮಿತಿಯವರು ಕ್ರೋಢೀಕರಿಸಿ ನಮ್ಮ ಮುಂದೆ ಇಟ್ಟಿದ್ದಾರೆಂಬುದನ್ನು ಮರೆತು, ಆ ವರದಿ ದೇಶದ ಹಿತಕ್ಕೆ ವಿರೋಧವಾಗಿದೆ ಎನ್ನುವ ರೀತಿಯಲ್ಲಿ ಮಾತನಾಡಿರುವುದನ್ನು ನೋಡಿದರೆ, ಮಾನ್ಯ ಸದಸ್ಯರುಗಳು ದೇಶದ ಪ್ರಗತಿಯ ಕಡೆ ಮನಸ್ಸನ್ನು ಹರಿಸುತ್ತಾ ಇಲ್ಲ, ದೇಶದ ಪ್ರಗತಿ ಅವರಿಗೆ ಬೇಕಾಗಿಲ್ಲವೇನೋ ಎನ್ನುವಷ್ಟು ಈ ಸಭೆಗೆ ಭಾಸವಾಗುತ್ತದೆ.

ಶ್ರೀ ಮಾರ್ಕ ಚನ್ನಬಸಪ್ಪನವರು ಮಾತನಾಡುವಾಗ ಮೊದಲು ಪರ್ಸನಲ್ ಇನಾಂ ಬಿಲ್ಲುಗಳ ಅನಂತರ Religious ಇನಾಮುಗಳ ವಿಷಯಗಳನ್ನೂ ಕೂಡ ಉದಹರಿಸಿ ಎಲ್ಲವನ್ನೂ ನಾವು ಪ್ರಗತಿ ಮಾರ್ಗದಲ್ಲಿ ಮಾಡಬೇಕಾಗಿದೆ, ಅದನ್ನೇ ಬೇರೆ ರೀತಿಯಾಗಿ ಮಾಡುವುದು, ಇದನ್ನೇ ಬೇರೆ ರೀತಿಯಾಗಿ ಮಾಡುವುದು ಸರಿಯಲ್ಲವೆಂದು ಹೇಳಿದ್ದಾರೆ. ಒಂದು ಕಡೆ ಒಬ್ಬ ಇನಾಂದಾರನ ಜಮೀನನ್ನು ಒಬ್ಬ ರೈತ ಅನುಭವಿಸತಕ್ಕಂಥ ಕಾಲದಲ್ಲಿ ಅದನ್ನು ನಾವು ಕಿತ್ತುಕೊಂಡು ಅದನ್ನು ಯಾವನು ಉಳುಮೆ ಮಾಡುತ್ತಿದ್ದಾನೋ ಅವನೇ ಆ ಭೂಮಿಯನ್ನು ಅನುಭವಿಸಬೇಕೆಂದು ಹೇಳುತ್ತೀರಿ ಇನ್ನೊಂದು ಕಡೆ ದೇವಸ್ಥಾನ ಇನಾಮು ಆಗಿದ್ದರೆ ಅದಕ್ಕೆ ಮಾತ್ರ ಕೈಹಾಕಬಾರದು ಎಂದು ಹೇಳುವುದು ಸರ್ವಥಾ ನ್ಯಾಯವಾದುದಲ್ಲ. ಒಂದು ನೀತಿಯನ್ನು ಹಾಕಿದರೆ ಅದು ದೇಶದಲ್ಲಿರತಕ್ಕ ಎಲ್ಲರಿಗೂ ಅನ್ವಯಿಸತಕ್ಕ ನೀತಿಯಾಗಿರಬೇಕು. Personal Inams (ಮನುಷ್ಯನಿಗೆ) ಸಂಬಂಧಪಟ್ಟಂಥ ಒಂದು ಆಸ್ತಿ ಇದ್ದರೆ ಹಿಂದೆ ಇನಾಮು ಬಿಲ್ಲನ್ನು ಚರ್ಚೆ ಮಾಡುವಾಗ ಯಾವುದೋ ಒಂದು ರೀತಿಯಲ್ಲಿ ಸಂಪಾದನೆ ಮಾಡಿದ ಆಸ್ತಿಯನ್ನು ಕಿತ್ತುಕೊಳ್ಳುವುದು ಸರಿಯೆಂದು ವಾದ ಮಾಡಿದ್ದಾರೆ. ಇವೊತ್ತಿನ ದಿವಸ ಈ Charitable ಇನಾಮುಗಳು ದೇವಸ್ಥಾನಗಳಿಗೆ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿವೆಂಬುದನ್ನು ಕೂಡ ಯೋಚನೆಮಾಡಬೇಕು. ನೂರಾರು ಎಕರೆ ಜಮೀನು ಇರುವ ದೇವಸ್ಥಾನಗಳ ಪರಿಸ್ಥಿತಿ ಏನಾಗಿದೆಯೆಂದರೆ ಆ ದೇವಸ್ಥಾನದ ಜಮೀನುಗಳನ್ನೆಲ್ಲಾ ಉಳುಮೆ ಮಾಡಿ ಅದರಿಂದ ಬರತಕ್ಕಂಥ ಹಣ ಅರ್ಚಕರ ಪ್ರಯೋಜನಕ್ಕೆ ಕೊಡದೆ ತಾವೇ ಅನುಭವಿಸಿಕೊಂಡು ಹೋಗುತ್ತಿರುವ ಪರಿಸ್ಥಿತಿ ನೂರಾರು ಇವೆ. ಊರಿನಲ್ಲಿರುವ ದೇವಸ್ಥಾನದ ಜಮೀನನ್ನು ಅನುಭವಿಸುವುದಕ್ಕೆ ಊರಿನಲ್ಲಿ ಪಾರ್ಟಿಗಳು ಆಗಿರುವ ಉದಾಹರಣೆಗಳು ನೂರಾರು ಇವೆ. ಸರ್ಕಾರದವರ ಯಾವನು ಜಮೀನನ್ನು ಮಾಡುತ್ತಿದ್ದಾನೋ ಯಾವನು ಕದೀಮು ಟೆನೆಂಟ್ ಆಗಿದ್ದಾನೋ ಆ ಭೂಮಿಯನ್ನು ಅವನ ಉಪಯೋಗಕ್ಕೆ ಬಿಟ್ಟು ಅದರಿಂದ ಬರತಕ್ಕ ಪ್ರತಿಫಲವನ್ನು ತಸ್ದೀಕ್ ರೂಪದಲ್ಲಿ ಅರ್ಚಕನಿಗೆ ಕೊಟ್ಟು ದೇವಸ್ಥಾನದ ಕೆಲಸಕಾರ್ಯಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗತಕ್ಕ ಮಾರ್ಗಗಳನ್ನು ಕಲ್ಪನೆ ಮಾಡೋಣವೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಇವೊತ್ತಿನ ದಿವಸ ಅರ್ಚಕರು ಜಮೀನನ್ನು ಅನುಭವಿಸದೆ ಅದರ ಪ್ರತಿಫಲವೂ ತಮಗೆ ಬಾರದೆ ಊರಿನವರ ಬಲ

(ಶ್ರೀ ಟಿ. ಎಸ್. ಮೂಡಲಗಿರಿಗೌಡ.)

ವಂತಹಕ್ಕೂ ಅಥವಾ ಸರಕಾರದ ಮುಂದೆ ಕಿತ್ತುಕೊಳ್ಳಬಹುದೆಂಬ ಭಯದಿಂದಲೂ ಭೂಮಿಯನ್ನು ಇವೊತ್ತು ಸಾಗುಮಾಡುತ್ತಿದ್ದೇವೆಂದು ಹೇಳಿಕೊಳ್ಳುವ ನಾಮಕಾವಾಸ್ತೆ ಸಾಗುವಳಿದಾರರಾಗಿದ್ದಾರೆ.

ಒಬ್ಬ ಸದಸ್ಯರು.—ಅಂತಹವರಿಂದ ಕಿತ್ತುಕೊಳ್ಳಿ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅಂಥವರಿಗೆ ಒಂದು ಕಾನೂನು, ಬೇರೆಯವರಿಗೆ ಇನ್ನೊಂದು ಕಾನೂನು ಮಾಡುವುದು ಸರಿಯೇ ಎಂಬುದನ್ನು ನಾವು ನೋಡಬೇಕು. ಈ ಬಿಲ್ಲನ್ನು ಸರ್ಕ್ಯುಲೇಟ್ ಮಾಡಬೇಕಾಗಿತ್ತೆಂದು ಶ್ರೀಮಾನ್ ಭೀಮಪ್ಪನಾಯಕ್‌ರವರು ಸಲಹೆ ಮಾಡಿದ್ದಾರೆ. ನೂರಾರು ಅರ್ಚಕರನ್ನು ನಾನು ವಿಚಾರಿಸಿದ್ದೇನೆ. ಈ ಬಿಲ್ introduce ಆದಮೇಲೆ ದೇಶಾದ್ಯಂತ ಇರುವ ಅರ್ಚಕರೆಲ್ಲರಿಗೂ ಈ ವಿಷಯ ಗೊತ್ತಾಗಿದೆ. ಆದ್ದರಿಂದ ಇದನ್ನು ಸರ್ಕ್ಯುಲೇಟ್ ಮಾಡುವ ಸಂದರ್ಭವಿಲ್ಲ. ಈ ಅಸೆಂಬ್ಲಿಯ ಕಾರ್ಯಕಲಾಪಗಳನ್ನು ದೇಶಾದ್ಯಂತ ಪ್ರತಿಯೊಬ್ಬರೂ ನೋಡುತ್ತಿದ್ದಾರೆ. ಅನೇಕ ಅರ್ಚಕರನ್ನು ನಾನು ಕೇಳಿದ್ದೇನೆ. ಅವರು ಸದ್ಯಕ್ಕೆ ಜಮೀನಿಗಿಂತ ತಸ್‌ದೀಕ್ ಕೊಡಲಿ ಎಂದು ಹೇಳುತ್ತಿದ್ದಾರೆ. ಇದು ಅರ್ಚಕರ ಮನಸ್ಸಿನಲ್ಲಿರತಕ್ಕಂಥ ವಿಷಯ. ಏತಕ್ಕೆಂದರೆ ಅವರಿಗೆ ದರಿದ್ರಾವಸ್ಥೆ ಬಂದಿರುವುದರಿಂದ 5-10 ಎಕರೆ ಜಮೀನು ಇದ್ದರೂ ಅದನ್ನು ಸಾಗುಮಾಡಿಕೊಂಡು ಹೋಗುವುದಕ್ಕೆ ಶಕ್ತಿಯಿಲ್ಲದೆ ತಸ್‌ದೀಕ್ ಕೊಟ್ಟರೆ ಸಂತೋಷಪಟ್ಟುಕೊಂಡು ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅವರು ಸಿದ್ಧರಾಗಿದ್ದಾರೆ. ಅವರಿಗೆ ಗೊಬ್ಬರ ಹಾಕುವುದಕ್ಕೆ ದುಡ್ಡು ಇಲ್ಲದೆ compensation ಕೊಡುವುದಕ್ಕೂ ಹಣವಿಲ್ಲದೆ ಜಮೀನನ್ನು ನೀವೇ ಇಟ್ಟುಕೊಳ್ಳಿ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಇನಾಂ ರದ್ಯಾತಿ ಬಿಲ್ಲನ್ನು ನಾವು ಜಾರಿಗೆ ತಂದಿದ್ದೇವೆ. ಯಾವ ರೂಪದಲ್ಲಿ ನಾವು ಅದನ್ನು ರಚಿಸಿದೆವೋ ಅದೇ ರೂಪದಲ್ಲಿ Religious ಇನಾಮನ್ನೂ ಕೂಡ ರೂಪಿಸಬೇಕೇ ಹೊರತು ಅದಕ್ಕೆ ಒಂದು ನೀತಿ ಇದಕ್ಕೆ ಒಂದು ನೀತಿ ಮಾಡುವುದು ಸಾಧುವಾದುದಲ್ಲ. 100ಕ್ಕೆ 90 ದೇವಸ್ಥಾನಗಳು ಸರಿಯಾದ ಸ್ಥಿತಿಯಲ್ಲಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಏನೇ ಹೇಳಲಿ, ಯಾವ ಹಳ್ಳಿಯಲ್ಲಿ ಯಾವ ದೇವಸ್ಥಾನ ಚೆನ್ನಾಗಿದೆ ಎಂಬುದನ್ನು ಯೋಚನೆ ಮಾಡಿದರೆ, ನಾನು ಹೇಳಿದ ಹಾಗೆ, ಮೇಜರ್ ದೇವಾಲಯಗಳನ್ನು ಬಿಟ್ಟು 100ಕ್ಕೆ 99 ದೇವಸ್ಥಾನಗಳು ಸರಿಯಾದ ಸ್ಥಿತಿಯಲ್ಲಿಲ್ಲ ಎಂಬುದು ಗೊತ್ತಾಗುತ್ತದೆ. ಸೆಲೆಕ್ಟ್ ಕಮಿಟಿಯವರು ನಮ್ಮ ಮುಂದೆ ಇಟ್ಟಿರತಕ್ಕಂಥ Religious ಇನಾಮು ಬಿಲ್ ಸರ್ವಸಮರ್ಪಕವಾಗಿದೆ. ನಾವು ಇದರಲ್ಲಿ ಅಲ್ಪ ಸ್ವಲ್ಪ ಲೋಪದೋಷಗಳು ಏನಾದರೂ ಇದ್ದರೆ ಅವನ್ನು ತಿದ್ದುಪಾಟುಮಾಡಿ ಬಹು ಶೀಘ್ರವಾಗಿ ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೊಡತಕ್ಕಂಥಾದ್ದು ನಮ್ಮ ಧರ್ಮವೇ ಹೊರತು ಅದು ದೇಶದ ಪ್ರಗತಿಗೆ ಅನುಕೂಲವಾಗಿಲ್ಲ ಇದರಿಂದ ಏನೂ ಪ್ರಯೋಜನವಾಗುತ್ತಾ ಇಲ್ಲ ಬಹಳ ಕಡಮೆ ಸಂಸ್ಥೆಗಳಿಗೆ ಇದರಿಂದ ಪ್ರಯೋಜನವಾಗುತ್ತದೆಯೆಂದು ಹೇಳಿದರೆ ಅದು ನೀತಿ ಬಾಹಿರವಾದ ಪ್ರಗತಿಯಿಲ್ಲದ ವಿಷಯವೆಂದು ಹೇಳುತ್ತೇನೆ. ಆದ್ದರಿಂದ ಮೊದಲು ಈ ಮಸೂದೆಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನಾನು ಇದನ್ನು ಸಮರ್ಥಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ Religious ಮತ್ತು Charitable ಇನಾಂ ಅಬಾಲಿಷನ್ ವರದಿಯನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಅನೇಕ ಸಂದರ್ಭಗಳಲ್ಲಿ 5 ವರ್ಷ ಅಥವಾ 10 ವರ್ಷಗಳಿಗೊಮ್ಮೆ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನುಗಳನ್ನು ಹರಾಜು ಮಾಡುವ ಪದ್ಧತಿ ನಮ್ಮಲ್ಲಿದೆ. ಹರಾಜುದಾರರು ಅದನ್ನು ದುಡ್ಡು ಕೊಟ್ಟು ಕೊಂಡು ಕೊಂಡು ಆ ಸ್ಥಳದೊಳಗೆ ಇಲ್ಲದೆ ಬೇರೆಯವರಿಗೆ ಗುತ್ತಿಗೆಗೆ ಕೊಟ್ಟು ಮಧ್ಯಸ್ಥರಾಗಿದ್ದಾರೆ. ಅವರು ವಾಸ್ತವವಾಗಿ ಸಾಗು ಮಾಡುತ್ತಿಲ್ಲ. ಹರಾಜಿನಲ್ಲಿ 30 ರೂಪಾಯಿಗೆ ತೆಗೆದುಕೊಂಡು ಬೇರೆ ರೈತರಿಗೆ ಜಮೀನನ್ನು ವಹಿಸಿ ಕೊಟ್ಟು ಆ ರೀತಿ ಸಾವಿರಾರು ರೂಪಾಯಿಗಳ ಪ್ರತಿಫಲವನ್ನು ಪಡೆದು ಸರ್ಕಾರಕ್ಕೆ 100 ರೂಪಾಯಿನ ಸಂದಾಯ ಮಾಡುವ ಸಂದರ್ಭಗಳು ನೂರಾರು ಇವೆ. ವಾಸ್ತವವಾಗಿ ಜಮೀನನ್ನು ಯಾವನು ಉಳುತ್ತಿದ್ದಾನೋ ಅವನನ್ನು ಇನಾಂದಾರನಾಗಿ ಪರಿಗಣಿಸದೆ ಯಾರು ಹರಾಜಿನಲ್ಲಿ ಕೊಂಡುಕೊಳ್ಳುತ್ತಾರೋ ಅಂಥವರನ್ನು ಇನಾಮುದಾರರಾಗಿ ಈ ಬಿಲ್ಲಿನಲ್ಲಿ ಪರಿಗಣಿಸಿದ್ದಾರೆ. ಆದ್ದರಿಂದ ಯಾರು ಯಾರು ವ್ಯವಸಾಯ ಮಾಡುತ್ತಾರೆಂಬುದನ್ನು ನೋಡಿದರೆ ಅಂಥಹವರು ಲಿಸ್ಟಿನಲ್ಲಿ ಕಂಡು ಬರುವುದಿಲ್ಲ. ಯಾರು ಹರಾಜುದಾರರಾಗಿರುತ್ತಾರೋ ಅವರಿಗೆ ಈ ಬಿಲ್ಲಿನಿಂದ ಅನುಕೂಲವಾಗುತ್ತದೆ. ಯಾರು ಮಧ್ಯಸ್ಥರಾಗಿ ಬೇರೆ ಉದ್ಯೋಗ ಮಾಡಿಕೊಂಡಿರುತ್ತಾರೋ ಅವರಿಗೆ ಜಮೀನನ್ನು ರಿಜಿಸ್ಟರ್ ಮಾಡುವುದು ಸರಿಯಾದುದಲ್ಲವೆಂದು ಹೇಳುತ್ತೇನೆ. ವಾಸ್ತವವಾಗಿ ಸರಕಾರ ಎಲ್ಲಾ ಜಮೀನನ್ನೂ ವಾಪಸು ತೆಗೆದುಕೊಂಡು ಯಾರು ಯಾರು ನಿಜವಾದ ರೈತರೋ, ಯಾರು ಯಾರು ನಿಜವಾಗಿ ವ್ಯವಸಾಯ ಮಾಡುತ್ತಾರೋ ಅಂಥವರಿಗೆ ಕೊಡುವುದು ನ್ಯಾಯ. ಹೀಗೆ ಇದನ್ನು ಗಮನಕ್ಕೆ ತೆಗೆದುಕೊಂಡು ಯಾರು ಯಾರು ಅಂತಹ ವ್ಯವಸಾಯಗಾರರೋ ಅಂಥವರಿಗೆ ಜಮೀನನ್ನು ಕೊಡಬೇಕೇ ಹೊರತು ಬಾಕಿಯವರಿಗೆ ಕೊಡಬಾರದು ಎಂದು ಹೇಳುತ್ತೇನೆ. ಈ ಮತ ಸಂಬಂಧವಾದ ವಿವಿಧ ಧರ್ಮ ಸಂಸ್ಥೆಗಳಿಗೂ ದೇವಾಲಯಗಳಿಗೂ ಕೂಡ ತಸ್‌ದೀಕು ಪ್ರತಿ ವರ್ಷವೂ ಕೊಡುತ್ತಾರೆ ಎಂದರೆ ಇದರಿಂದ ಅವರಿಗೆ ಬಹಳ ತೊಂದರೆ ಬರುತ್ತದೆ. ಇದರಿಂದ ಜನಕ್ಕೂ ಮತ್ತು ಸರಕಾರಕ್ಕೂ ಮನಸ್ತಾಪ ಆಗುವ ಸಂದರ್ಭವೂ ಬರಬಹುದು. ಆದ್ದರಿಂದ ಕೆಲವು ಕಡೆಗಳಲ್ಲಿ ಈಗಿರುವ ಪದ್ಧತಿಯನ್ನು ಇಟ್ಟುಕೊಂಡು ಸಣ್ಣ ಸಣ್ಣ ದೇವಾಲಯಗಳಲ್ಲಿ ಪ್ರತಿಫಲವನ್ನು ಅವರೇ ತೆಗೆದುಕೊಳ್ಳುವ ಹಾಗೆ ಮಾಡುವುದು ನ್ಯಾಯ. 1 ಎಕರೆಗೆ 4 ಪಲ್ಲ ಭತ್ತವನ್ನೋ ಅಥವಾ ರಾಗಿಯನ್ನೋ ದೇವಾಲಯಕ್ಕೆ ಕೊಡುತ್ತಾನೆ ಎನ್ನೋಣ. ಅದನ್ನು ಒಬ್ಬ ರೈತ ವಹಿಸಿಕೊಂಡರೆ ದೇವಾಲಯಕ್ಕೆ ಉತ್ಪತ್ತಿ ಹೆಚ್ಚಿಗೆ ಬರುತ್ತದೆಂದು ನಾವು ಗಣನೆಗೆ ತೆಗೆದುಕೊಳ್ಳಬಹುದು. ಆದರೆ ನಾಳೆ ದಿವಸ ದವಸ ಧಾನ್ಯಗಳು ಇರಲಿ ಇಲ್ಲದೇ ಹೋಗಲಿ ಸರ್ಕಾರ ಹಣವನ್ನು ಕೊಡುವ ಸಂದರ್ಭ ಬರುತ್ತದೆ. ಸಂಸ್ಥೆಗಳಿಗೂ ಕೂಡ ಅನ್ಯಾಯವಾಗುತ್ತದೆ. ಧಾರಣೆ ವಾಸಿಗಳ ಬಿದ್ದುಹೋದಾಗ ಸರ್ಕಾರ ಇದರಿಂದ ನಷ್ಟ ಪಟ್ಟುಕೊಳ್ಳುವ ಸಂದರ್ಭ ಬರುತ್ತದೆಂದು ನನ್ನ ಅಭಿಪ್ರಾಯ. ಸರ್ಕಾರದವರು ಮಧ್ಯವರ್ತಿಕೆಯನ್ನು ವಹಿಸಿಕೊಂಡು ರೈತರಿಗೆ ಜಮೀನುಗಳನ್ನು ರಿಜಿಸ್ಟರ್ ಮಾಡಿಕೊಡುತ್ತೇವೆ, ಕಂದಾಯದ ಹಣಕ್ಕೂ ಉತ್ಪತ್ತಿಯ ಹಣಕ್ಕೂ ಇರತಕ್ಕ ವ್ಯತ್ಯಾಸದ 33⅓ ರಷ್ಟು ಹಣವನ್ನು ಕೊಡು

ವುದಾದರೆ ರೈತರಿಗೆ ರಿಜಿಸ್ಟರ್ ಮಾಡಿಕೊಡುತ್ತೇವೆ ಎಂದು ಇಲ್ಲಿ ಹೇಳಿದ್ದೀರಿ. ಆದರೆ, ಈ ಮಧ್ಯೆ ಒಂದ instalment ನ್ನು ಸರ್ಕಾರಕ್ಕೆ ಕೊಟ್ಟಿದ್ದು, ಆಮೇಲೆ ಅರ್ಧದಲ್ಲಿ ಆತನು ವಹಿಸಿಕೊಳ್ಳುವುದಕ್ಕಾಗುವುದಿಲ್ಲ ವೆಂದು ಹೇಳಿದರೆ, ಮೊದಲು ಕೊಟ್ಟಿದ್ದ instalment ನ ಬಗ್ಗೆ ಏನು ಮಾಡುತ್ತೀರೆಂಬುದನ್ನು ಹೇಳಿಲ್ಲ. ಬಹುಶಃ ರೂಲ್ಸ್‌ನಲ್ಲಿ ಅದನ್ನು ಮಾಡಬಹುದೆಂದು ಕಾಣುತ್ತದೆ. ಆದರೆ, ನಿರ್ದಿಷ್ಟವಾಗಿ ರೈತರು ಒಂದೇಸಾರಿ ಕೊಟ್ಟು ಬಾಂಡೋ ಅಥವಾ ಬ್ಯಾಂಕಿನ ಮುಖಾಂತರವೋ ಹಣ ಪಾವತಿ ಮಾಡುವುದಕ್ಕೆ ವ್ಯವಸ್ಥೆ ಮಾಡಬಹುದೆಂದು ನನಗೆ ತೋರುತ್ತದೆ.

ಎಷ್ಟೋ ಕಡೆಗಳಲ್ಲಿ ಪೂಜೆಪುನಸ್ಕಾರಗಳು ನಡೆಯುತ್ತಿಲ್ಲ, ಮಧ್ಯವರ್ತಿ ಜನಗಳು ಈ ಹಣವನ್ನು ದುರುಪಯೋಗ ಮಾಡಿಕೊಂಡರೆ, ದೇವಸ್ಥಾನಗಳಿಗೆ ಏನೂ ಉಪಯೋಗ ಮಾಡಿದಂತಾಗಲಿಲ್ಲ ಎಂದು ಶ್ರೀ ಮೂಡಲಗಿರಿಗೌಡರು ಹೇಳಿದರು. ನಿಜ; ವಾಸ್ತವ ವಾಗಿ ಅಂಥ ಸಂದರ್ಭಗಳಿವೆ. ಸರ್ಕಾರದವರು ಅಂಥ ಸಂದರ್ಭಗಳಲ್ಲಿ ಜಮೀನುಗಳನ್ನು ತಾವೇ ತೆಗೆದುಕೊಂಡು ಮಾರಾಟ ಮಾಡಿ ಬಂದ ಹಣವನ್ನು ನಿರ್ದಿಷ್ಟವಾಗಿ ಒಂದೆಡೆ ಇಟ್ಟು ಬಡ್ಡಿಯ ರೂಪದಲ್ಲೋ ಅಥವಾ ಇನ್ನಾವ ರೂಪದಲ್ಲೋ ದೇವಾಲಯಗಳಿಗೆ ಸಂದಾಯ ಮಾಡಿದರೆ ಅನುಕೂಲವಾಗುತ್ತದೆ. ಹಾಗೆಯೇ ವಿದ್ಯಾಭ್ಯಾಸಕ್ಕಾಗಿ ಕೊಟ್ಟಿರುವ ಧರ್ಮ ಸಂಸ್ಥೆಗಳ ಬಗ್ಗೆಯೂ ಪ್ರತ್ಯೇಕ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳಿ ಈ ಬಿಲ್ಲನ್ನು ನಾನು ಅನುಮೋದಿಸುತ್ತೇನೆ.

*ಶ್ರೀ ಎಚ್. ಟಿ. ಪುಟ್ಟಪ್ಪ (ಹೊಸಕೋಟೆ-ಆನೇಕಲ್-ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸೆಲೆಕ್ಟ್ ಕಮಿಟಿಯ ವರದಿಯೊಡನೆ ತಿದ್ದುಪಾಟಾದ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಶ್ರೀ ಛನ್ನಬಸಪ್ಪನವರು, "ಈ ಮಸೂದೆ ಯಾವ ರೀತಿ ತಿದ್ದುಪಾಟಾಗಿದೆ, ಆ ರೀತಿಯಲ್ಲೇ ಇದನ್ನು ಅನುಮೋದಿಸುವುದಾದರೆ ಗ್ರಾಮಾಂತರಗಳಲ್ಲಿರುವ ಅನೇಕ ದೇವಸ್ಥಾನಗಳು ಹಾಳುಬಿದ್ದು ಹೋಗುತ್ತವೆ, ಪೂಜೆ ಪುನಸ್ಕಾರಗಳೇನೂ ನಡೆಯುವುದಿಲ್ಲ, ಅದಕ್ಕಾಗಿ ದೇವಸ್ಥಾನಗಳ ಹೆಸರಿಗೇ ಜಮೀನುಗಳನ್ನು ಮಾಡಬೇಕು" ಎಂದು ಹೇಳಿದರು.ಅವರು ಮತ್ತೂ ಒಂದು ಮಾತು ಹೇಳಿದರು, 'ಈಚೆಗೆ ನಾನು ನನ್ನ ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಂಡಿದ್ದೇನೆ; ಸೋಷಿಯಲಿಸ್ಟ್ ಪಾಟ್ರನ್ನಿನ ಸಮಾಜ ಬರಲಿರುವುದರಿಂದ ನನ್ನ ಅಭಿಪ್ರಾಯವೂ ಬದಲಾವಣೆಯಾಗಿದೆ' ಎಂದು.

Sri H. M. CHANNABASAPPA.—He is misquoting me, Sir. . . .

ಶ್ರೀ ಎಚ್. ಟಿ. ಪುಟ್ಟಪ್ಪ.—ಹಾಗೆ ಮಾಡುವುದಾದರೆ, ನಾವು ಒಂದು ಬಗೆಯ ಮಧ್ಯಸ್ಥಗಾರರನ್ನು ಕಡಿದು ಹಾಕಿ ದೇವಸ್ಥಾನವೆಂಬ ಮಧ್ಯಸ್ಥಗಾರರನ್ನು ಸೃಷ್ಟಿಸಿದ ಹಾಗಾಗುತ್ತದೆ. ಇನಾಂ ಪದ್ಧತಿಯನ್ನು ರದ್ದು ಮಾಡುವ ಉದ್ದೇಶ, ಇನಾಂ ಜಮೀನುಗಳು ಬ್ರಾಹ್ಮಣರ ಕೈಯಲ್ಲೇ ಇದ್ದು ಸರಿಯಾಗಿ ಸಾಗುವಳಿಯಾಗದೆ ಹೀನಸ್ಥಿತಿಗೆ ಬರುವುದನ್ನು ತಪ್ಪಿಸಬೇಕೆಂದಿದೆ. ಹಾಗೆ ಹೀನಸ್ಥಿತಿಗೆ ಬರುವುದಕ್ಕೆ ಕಾರಣ ಜಮೀನನ್ನು ಯಾರು ಮಾಡುತ್ತಾರೋ ಅವರಿಗೆ ಮಾಲೀಕತ್ವವಿಲ್ಲದೆ ಇದ್ದುದು. ಇನಾಂದಾರರು ಜಮೀನಿನಲ್ಲಿ ಬರುವಂಥ ಬೆಳೆಯನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರೇ ಹೊರತು ಜಮೀನನ್ನು ಆಬಾದಿನಲ್ಲಿಡುವ ಆಸೆ ಹೊಂದಿರಲಿಲ್ಲ. ಆದ್ದರಿಂದ ಈ ಪದ್ಧತಿಯನ್ನೇ ಬದಲಾಯಿಸಬೇಕೆಂದು ಹೇಳಿ ಈ ಬಿಲ್ಲನ್ನು ಮಾಡಿದ್ದಾಗಿದೆ. ಅಂಥಾದ್ದರಲ್ಲಿ ಈ ದಿವಸ ಮತ್ತೆ ದೇವಸ್ಥಾನದ ಹೆಸರಿಗೆ ಪುನಃ ರಿಜಿಸ್ಟರ್ ಮಾಡುವುದಾದರೆ ಈಗಿನ ಸ್ಥಿತಿಯೇ ಮುಂದುವರಿಯುತ್ತದೆಯೇ ಹೊರತು ಬದಲಾವಣೆಯೇನೂ ಆದ ಹಾಗಾಗುವುದಿಲ್ಲ. ನಾವು ಇನಾಂ ಪದ್ಧತಿಯನ್ನು ಬದಲಾವಣೆ ಮಾಡಬೇಕು ಎನ್ನುವಾಗ ಯಾವ ವ್ಯಕ್ತಿ ಸಾಗುವಳಿ ಮಾಡುತ್ತಾನೆಯೋ ಅವನಿಗೇ ಜಮೀನಾಗಬೇಕೆಂದು ಅಭಿಪ್ರಾಯವೇ ಹೊರತು ಮಧ್ಯೆ ಸರ್ಕಾರವೇ ಆಗಲಿ, ದೇವಸ್ಥಾನವೇ ಆಗಲಿ ಮಾಲೀಕತ್ವವನ್ನು ವಹಿಸಿಕೊಳ್ಳುವುದು ನಮ್ಮ ನೀತಿಗೆ ಸರಿಹೋಗುವುದಿಲ್ಲ. ಹಾಗೆ ಮಾಡಿದರೆ ಜಮೀನು ಉತ್ತಮ ಸ್ಥಿತಿಗೆ ಬರುವುದಕ್ಕಾಗಲಿ, ಅಥವಾ ಹೆಚ್ಚಿಗೆ ಫಲ ಕೊಡುವಂತೆ ಮಾಡುವುದಕ್ಕಾಗಲಿ ಅವಕಾಶವಾಗುವುದಿಲ್ಲ. ಏಕೆಂದರೆ, ಮತ್ತೆ ಕೆಲವು ಪಂಗಡದ ರೈತರು ಸಾಗುವಳಿ ಮಾಡುತ್ತಿರುವ ಜಮೀನು ಸರ್ಕಾರದ ವಶಕ್ಕೆ ಹೋಗುತ್ತದೆ, ಸರ್ಕಾರದ ಅಧೀನದಲ್ಲಿ ಷಿಕ್ಮಿಯಾಗಿ ಕೆಲಸಮಾಡಬೇಕಾಗಿರುತ್ತದೆ ಅಷ್ಟೆ. ಈ ಮಸೂದೆಯಲ್ಲಿ ಇದನ್ನು ತಪ್ಪಿಸಿ, ಕದೀಂ ರೈತರು ಮತ್ತು ಪರ್ಮನೆಂಟ್ ರೈತರಂತೆ ಜಮೀನನ್ನು ಸ್ವಂತವಾಗಿ ಮಾಡಬಹುದೆಂದು ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು. ಇದನ್ನು ಅವರಿಗೂ ಕಲ್ಪಿಸಿಕೊಡಬೇಕು. ಹಾಗಿಲ್ಲದೆ, ಇಲ್ಲಿ ಹೇಳಿರುವಂತೆ $33\frac{1}{3}$ ರಷ್ಟು ಹಣ ಕೊಡಬೇಕೆಂದು ಹೇಳಿದರೆ, ಅವರು ಯಾವತ್ತಿಗೂ ಮಾಲೀಕರಾಗುವುದಿಲ್ಲ. ಅವರಿಗೂ ಹಕ್ಕು ಬರುವ ರೀತಿಯಲ್ಲಿ ಬದಲಾವಣೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಅಧ್ಯಕ್ಷರೇ, ಈಗ ಇನಾಂ ಬಿಲ್ಲಿನ ಮೇಲೆ ಮಾತನಾಡಿದ ಮಾನ್ಯಸದಸ್ಯರ ಮಾತುಗಳನ್ನು ಕೇಳಿದರೆ ನನಗೆ ಬೇರೊಂದು ತೆರದ ಭಾವನೆ ಹೊಳೆಯುತ್ತದೆ. ಈಗ ಸಾಮಾನ್ಯವಾಗಿ, ಪರ್ಸನಲ್ ಇನಾಂಗಳು ರಿಲಿಜಿಯಸ್ ಇನಾಂಗಳು ಬರಲಿಲ್ಲ ಎಂದು ನಾವು ಕೇಳುತ್ತಿದ್ದರೆ ಅದೆಲ್ಲಾ ಸಾವಿರಾರು ಎಕರೆಗಳಿರುವ ಇನಾಂಗಳ ಮಾತು ಎಂದು ತಾವು ತಿಳಿಯಬೇಕು. ಹಾಗಿಲ್ಲದೆ ಎಲ್ಲಕ್ಕೂ ಎಂದು ಹೇಳಿ ಗ್ರಾಮಾಂತರಗಳಲ್ಲಿ 9,080 ದೇವಸ್ಥಾನಗಳಿವೆ, ಅವುಗಳಿಗೆ ಸೇರಿರುವ ಜಮೀನುಗಳನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಅರ್ಥವಲ್ಲ. ಈ 9,080 ದೇವಸ್ಥಾನಗಳಿಗೆ ಇರತಕ್ಕ ಜಮೀನುಗಳು ಒಂದೊಂದಕ್ಕೂ ಎಷ್ಟೆಷ್ಟು ಎಂದು ನೋಡುವುದಾದರೆ ಅನೇಕವುಗಳಿಗೆ ಇರುವುದೆಲ್ಲಾ 10 ಎಕರೆ, 4 ಎಕರೆ, 3 ಎಕರೆ, ಒಂದು ಎಕರೆ—ಇಷ್ಟರಲ್ಲೇ ಇದೆ. ಇವೆಲ್ಲವನ್ನೂ ಸರಕಾರ ವಹಿಸಿಕೊಂಡು ತಸ್ದೀಕ್ ಕೊಡುವುದು ಎಂದರೆ 'ತಲೆಗಿಂತ ಏನೋ ದಪ್ಪ' ಎನ್ನುವಂತೆ ಮಾಡಿದಹಾಗಾಗುತ್ತದೆ; ದೇವಸ್ಥಾನಗಳು ದಿಕ್ಕೆಟ್ಟು ಹೋಗುತ್ತವೆ. ಒಂದು ದೇವಸ್ಥಾನಕ್ಕೆ ಎರಡು ಎಕರೆ ಖುಷ್ಕಿಯೋ ಎರಡು ಎಕರೆ ತರಿಯೋ ಇದ್ದರೆ ಅದನ್ನು ಸಾಮಾನ್ಯವಾಗಿ ಪೂಜಾರಿಯೇನೂ ಉಳುವುದಿಲ್ಲ, ಪೂಜಾರಿಯ ಹೆಸರಿನಲ್ಲೂ ಇರುವುದಿಲ್ಲ; ದೇವರ ಹೆಸರಿನಲ್ಲಿರುತ್ತದೆ. ಯಾರೋ ಧರ್ಮಾತ್ಮರು, ಪುಣ್ಯವಂತರು, ಮಹಾರಾಜರು ಹಿಂದೆ ದೇವರಿಗಾಗಿ ಕೊಟ್ಟಿದ್ದು ದೇವರ ಹೆಸರಿನಲ್ಲಿ ಉಳಿದಿರುತ್ತದೆ. ಅದನ್ನೆಲ್ಲಾ ಈಗ ರೈತರ ಹೆಸರಿಗೇ ಮಾಡಬೇಕು, ಅವನ ಅಪ್ಪನ ಕಾಲದಿಂದ ಮಾಡಿಕೊಂಡು ಬಂದುದು ಎಂದು ಹೇಳುವುದು ಸರಿಯಲ್ಲ. ಸಾವಿರಾರು ಎಕರೆಗಳಿರುವ ಕಡೆ ಬೇಕಾದರೆ ಮಾಡಿ. ಇಂಥವುಗಳ ಮಟ್ಟಿಗೆ ಮಾತ್ರ ದೇವರ ಹೆಸರಿನಲ್ಲಿಯೇ ಬಿಡುವುದು ಒಳ್ಳೆಯದು.

(ಶ್ರೀ ಶಿವನಂಜೇಗೌಡ.)

ಇದರ ಹಾಗೆಯೇ ತೋಟಿತಳವಾರರುಗಳ ಜಮೀನಿದೆ; ಅದಕ್ಕೆಲ್ಲಾ ಹಣ ಕೊಡಬೇಕೆಂದು ಹೊರಟರೆ ದೊಡ್ಡ ಕಷ್ಟ ಬರುತ್ತದೆ. ಗ್ರಾಮಾಂತರಗಳಲ್ಲಿ ಅನೇಕ ದೇವಸ್ಥಾನಗಳು ಹೋಗಿವೆಯೆಂದು ಹೇಳಿ ಒಂದು ವಾದ ಬಂತು. ಅದನ್ನು ನಾನು ಒಪ್ಪುವುದಿಲ್ಲ. ನಮ್ಮ ಕಡೆಯಲ್ಲಿ ನಿಜವಾಗಿಯೂ ಜನರಿಗೆ ದೇವರಲ್ಲಿ ಬಹಳ ಭಕ್ತಿಯಿದೆ. ಅವುಗಳಿಗೆಲ್ಲಾ ಒಂದು ಎಕರೆ, ಎರಡು ಎಕರೆ—ನಾಲ್ಕು ಎಕರೆ, ಈ ರೀತಿ ದೇವರಿಗೆ ಬಿಟ್ಟಿದೆ. ಅವುಗಳ ವರಮಾನದಿಂದ ಪೂಜೆ ನಡೆಯುವಂತೆ ಮಾಡುವುದನ್ನು ಬಿಟ್ಟು ಅದನ್ನೆಲ್ಲಾ ಕಿತ್ತುಕೊಂಡು ತಸ್ದೀಕ್ ಕೊಡುತ್ತಾ ಕೊಡುತ್ತಾ ಹೋಗುವುದು ಎಂದರೆ, ಇನ್ನು ಇದಕ್ಕೆ ಬೇರೆ ಸಿಬ್ಬಂದಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ದೇವಸ್ಥಾನಗಳ ಜಮೀನನ್ನೂ ಯಾರಿಗೂ ಕೊಡದೆ ಅವಕ್ಕೆ ದೇವರೇ ಮಾಲೀಕರಾಗಿರುವಂತೆ ಮಾಡಿ. ಅವುಗಳಿಂದ ಗುತ್ತಿಗೆ ಏನು ಬರುತ್ತದೋ ಅದರಿಂದ ಪೂಜೆ ಪುನಸ್ಕಾರಗಳು ನಡೆಯುವಂತಾಗಲಿ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನೀವು ಮಾತನಾಡುತ್ತಿರುವ ರೀತಿರಿಂದ, ಮುಲ್ಕ ಗೋವಿಂದರೆಡ್ಡಿ, ಗೋಪಾಲಗೌಡರಿಗೆ ದಾರಿ ಹಾಕಿ ಕೊಡುತ್ತಿದ್ದೀರಲ್ಲಾ!

ಶ್ರೀ ಶಿವನಂಜೇಗೌಡ.—ನಾನು ಹೇಳುವುದಿಷ್ಟೆ. ಹಳ್ಳಿಗಾಡಿನಲ್ಲಿರುವ .ದೇವಸ್ಥಾನಗಳಿಗೆ ಇದನ್ನು ಅನ್ವಯಿಸುವುದು ಬೇಡ. ಸಾವಿರ ಎಕರೆ, ಎರಡು ಸಾವಿರ ಎಕರೆ ಇರುವುವುಗಳ ಮಾತು ಬೇರೆ. ಅವಕ್ಕೆ ತಕ್ಕಂಥ ದಾರಿ ಏನುಬೇಕಾದರೂ ಮಾಡಿ. ಗ್ರಾಮಾಂತರ ಪ್ರದೇಶದವುಗಳಿಗೆ ಮಾತ್ರ ತಸ್ದೀಕ್ ಕೊಡುವ ವಿಚಾರಕ್ಕೆ ಹೋಗಬೇಡಿ. ಆ ಜಮೀನುಗಳು ದೇವರ ಹೆಸರಿನಲ್ಲೇ ಇರಲಿ. ಇದರಿಂದ ದೇವರಿಗೆ ಹೆಚ್ಚಿನ ಭಕ್ತಿಯಿಂದ ಪೂಜೆಗಳು ನಡೆಯುತ್ತವೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಸರ್ಕಾರದವರು ಸಭೆಯ ಮುಂದಿಟ್ಟಿರುವ ಜಾಯಿಂಟ್ ಸೆಲೆಕ್ಟ್ ಕಮಿಟಿಯ ವರದಿಯನ್ನು ನಾನು ಸ್ವಾಗತಿಸಬೇಕೆಂದಿದ್ದೇನೆ. ಕೆಲವು ವಿಷಯಗಳಲ್ಲಿ ಮಾತ್ರ ತಿದ್ದುಪಡಿ ಮಾಡಿದರೆ ಸರಿಹೋಗುತ್ತದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಶ್ರೀಮಾನ್ ಚನ್ನಬಸಪ್ಪನವರು ಹೇಳಿದಹಾಗೆ ದೇಶ ಮುಂದುವರಿದು ಎಲ್ಲೆಲ್ಲೂ ಉಳುವವನೇ ಜಮೀನಿನ ಮಾಲೀಕನಾಗಬೇಕೆಂದು ಹೇಳತಕ್ಕ ಕಾಲಬಂದಿದೆ. ಅದನ್ನು ಕಾರ್ಯಾಚರಣೆ ತರುವ ಸಂದರ್ಭ ಬಂದಿದೆ. ಹೀಗಿರುವಾಗ ಆ ತತ್ವವನ್ನು ಅಡಿಗಲ್ಲಾಗಿಟ್ಟುಕೊಂಡು ಈ ಬಿಲ್ಲನ್ನು ನಾವು ಪರಿಶೀಲನೆ ಮಾಡಿದ ಪಕ್ಷದಲ್ಲಿ ಈ ಬಿಲ್ಲಿನಲ್ಲಿ ಮೂಲ ಬಿಲ್ಲಿನಲ್ಲಿದ್ದುದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಅನೇಕ ಹೊಸ ವಿಚಾರಗಳನ್ನು ಇದರಲ್ಲಿ ಅಳವಡಿಸಿದ್ದಾರೆಂದು ಕಂಡುಬರುತ್ತದೆ. ಮುಂಚೆ tenants-at-willಗಳ ಪ್ರಶ್ನೆಯಿರಲಿಲ್ಲ. ಈಗ ಪ್ಲಾನಿಂಗ್ ಕಮಿಷನ್ನಿನವರ ಸಲಹೆಯಮೇಲೆ ಇದನ್ನೂ ಹೊಸದಾಗಿ ಸೇರಿಸಿದೆ. ತಾತ್ಕಾಲಿಕವಾಗಿ ಯಾರು ಉಳುತ್ತಾನೋ ಅವನೂ ಸಹ ಭೂಮಾಲೀಕನಾಗುವ ಅವಕಾಶವನ್ನು ಒದಗಿಸಿದ್ದಾರೆ. ಇದೇನೋ ಒಳ್ಳೆಯದು, ಆದರೂ ಇದನ್ನು ಕಾರ್ಯಾಚರಣೆಗೆ ತರುವಾಗ ಬಹಳ ಕಷ್ಟಗಳು ಬರಬಹುದೆಂದು ಕಾಣುತ್ತದೆ. ಉದಾಹರಣೆಗೆ ಕೆಲವು ಕಡೆ—ನಾನೇ ನೋಡಿದ್ದೇನೆ—ಅನೇಕ ದೇವಸ್ಥಾನಗಳ ಜಮೀನುಗಳನ್ನು ಐದು ವರ್ಷ, ಹತ್ತು ವರ್ಷಗಳ ಗುತ್ತಿಗೆಗೆ ಕೊಟ್ಟಿರುವ ಸಂದರ್ಭಗಳಿವೆ. 5ನೆಯ ಸೆಕ್ಷನ್ ಪ್ರಕಾರ ಒಬ್ಬ 12 ವರ್ಷ ಸಾಗುವಳಿ ಮಾಡಿದ್ದಲ್ಲಿ ಅವನು ಖಾಯಂ ಟೆನೆಂಟ್ ಆಗುವುದಕ್ಕೆ ಅವಕಾಶವಿದೆ. ಆದ್ದರಿಂದ ಅಂಥ ಸಂದರ್ಭಗಳಲ್ಲಿ ಆತ ನಾಳೆ ಕೇಳಬಹುದು, ತಾನು 12 ವರ್ಷ ಸಾಗುವಳಿ ಮಾಡಿದ್ದೇನೆ . . . .

Sri L. SIDDAPPA.—But there is clause 9. The Deputy Commissioner has the power . . . .

ಶ್ರೀ ಟಿ. ಸಿ. ಬಸಪ್ಪ.—ಸೆಕ್ಷನ್ 9ರ ಪ್ರಕಾರ ಡೆಪ್ಯುಟಿ ಕಮಿಷನರಿಗೆ ನಿಜವಾಗಿ ಪರ್ಮನೆಂಟ್ ಆಗಿದ್ದಾನೆಯೇ ಇಲ್ಲವೇ ಎಂದು ತೀರ್ಮಾನ ಮಾಡುವುದಕ್ಕೆ ಹಕ್ಕಿದೆ. ಆದರೆ ನಾನು ಹೇಳಿದಂತೆ 12 ವರ್ಷ ಅವಿಚ್ಛಿನ್ನವಾಗಿ ಸಾಗುವಳಿ ಮಾಡಿದ್ದ ಪಕ್ಷದಲ್ಲಿ ಅವನಿಗೆ ಪರ್ಮನೆಂಟ್ ಟೆನೆಂಟ್ ಆಗುವುದಕ್ಕೆ ಅವಕಾಶ ಕೊಡಲೇಬೇಕಾಗಿದೆ 5ನೆಯ ಸೆಕ್ಷನ್ ಪ್ರಕಾರ.

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಇಲ್ಲ. ಈಗ definitionನನ್ನು ಬದಲಾವಣೆ ಮಾಡಿದ್ದೇವೆ.

ಅಧ್ಯಕ್ಷರು.—Explanatory note ನಲ್ಲಿ ನೀವು ಹೇಳುವ ಹಾಗೆಯೇ ಇದೆ; ಆದರೆ definitionನ್ನಲ್ಲಿ ವ್ಯತ್ಯಾಸಮಾಡಿದೆ.

Sri Kadidal MANJAPPA.—That is the law in force now. We are not adding anything new. Whether inamdari or Government land, when a person who cultivates land for over 12 years and there is no satisfactory evidence regarding the tenancy then he will be deemed as a permanent tenant.

ಶ್ರೀ ಟಿ. ಸಿ. ಬಸಪ್ಪ.—ಹಾಗಾದರೆ ಅದರ ಪ್ರಕಾರ ಕೂಡ ಯಾವ ಒಬ್ಬ ಮನುಷ್ಯನಾಗಲಿ ಒಂದು ಭೂಮಿಯನ್ನು 12 ವರ್ಷಗಳಿಗೆ ಮೇಲ್ಪಟ್ಟು ಸಾಗುವಳಿ ಮಾಡಿಕೊಂಡು ಅದನ್ನು ಅನುಭವಿಸಿಕೊಂಡು ಬಂದಿದ್ದರೆ ಮಾತ್ರವೇ ಆತನಿಗೆ ಆ ಭೂಮಿಯ ಸ್ವಾಮ್ಯವನ್ನು ಕೊಡಬೇಕೆಂದು ಹೇಳಿದಹಾಗೆ ಆಯಿತು.

Sri Kadidal MANJAPPA.—It is not so. Merely because a man cultivates the land for over 12 years, he will not acquire the right of permanent tenant.

Sri L. SIDDAPPA (Channagiri).—The point now raised is, supposing the person has purchased the right of cultivation for 5 or 10 years from revenue or muzrai authorities and he in turn leases the land to another person. Who is to be considered as the person who is in possession of the land ?

Sri Kadidal MANJAPPA.—If a person who has bought the right of cultivation, sublets his right, according to the rules in force, such a thing is prohibited.

Sri A. BHEEMAPPA NAIK.—Supposing he had sublet it 20 years back for a period of 30 years.

Sri Kadidal MANJAPPA.—Even previously, subletting was prohibited. Merely because he cultivates the land for 12 years or 20 years, he will not

acquire the right. Unless he satisfies the conditions laid down under section 79 of the Land Revenue Code, he won't become a permanent tenant.

Mr. SPEAKER.—The House will rise for lunch and meet at 3-30.

The House adjourned for Lunch at Three Minutes past Three of the Clock and reassembled at Thirty-two Minutes past Three of the Clock.

[MR. DEPUTY SPEAKER in the Chair.]

ಶ್ರೀ ಟಿ. ಸಿ. ಬಸಪ್ಪ.—ಸ್ವಾಮಿ, ತಾವು ಈಗ ಈ ಸೆಕ್ಷನ್ 6ರಲ್ಲಿ ಹೇಳಿರುವಂತೆ ಇನಾಂದಾರನ ಕೈಕೆಳಗೆ ಇರುವಂಥ ರೈತರುಗಳೆಲ್ಲಾ ಇನ್ನು ಮೇಲೆ ಸರ್ಕಾರದ ಕೈಕೆಳಗೆ ಬಂದುಬಿಡುತ್ತಾರೆ. ಹೀಗಾಗುವುದರಿಂದ ಕೆಲವು ಗ್ರಾಮಗಳಲ್ಲಿ ಏನಾಗುತ್ತದೆಂದರೆ—ಇಲ್ಲಿಯ ವರೆಗೂ ಹಳ್ಳಿಗಳಲ್ಲಿ ಈ ಜಮೀನುಗಳನ್ನು ಎಂದರೆ 5-10 ಎಕರೆಗಳಿರತಕ್ಕಂಥ ಜಮೀನುಗಳನ್ನು ವರ್ಷವರ್ಷೇ ಗುತ್ತಿಗೆಗೆ ಕೊಡತಕ್ಕಂಥ ಅಭ್ಯಾಸವಿತ್ತು. ಹೀಗೆ ಜಮೀನನ್ನು 5-10 ವರ್ಷಗಳವರೆಗೂ ಗುತ್ತಿಗೆಗೆ ಕೊಡಲಾಗುತ್ತಿದ್ದಿತು.

ಶ್ರೀ ಡಿ. ದೇವರಾಜ ಅರಸ್.—10 ವರ್ಷಗಳ ಕಾಲ ಗುತ್ತಿಗ್ಗೆ ಕೊಡತಕ್ಕಂಥ ಪದ್ಧತಿ ಎಲ್ಲಿಯೂ ಇಲ್ಲ.

ಶ್ರೀ ಟಿ. ಸಿ. ಬಸಪ್ಪ.—ತಾವಿಲ್ಲಿ ಹೇಳಿರುವ ಪ್ರಕಾರ ಅಂದರೆ ಈ 6ನೆಯ ಸೆಕ್ಷನ್ ಪ್ರಕಾರ ಆ ರೈತರುಗಳೆಲ್ಲಾ ಸರ್ಕಾರದ ಟೆನೆಂಟ್ಸ್ ಆಗುವುದಕ್ಕೆ ಅವಕಾಶವಾಗುತ್ತದೆ. ಅವರು ಆಗ ತಮ್ಮ ಕಂದಾಯ ವಗೈರೆಗಳನ್ನೆಲ್ಲಾ ನೇರವಾಗಿ ಸರ್ಕಾರಕ್ಕೇ ಕೊಡಬಹುದು. ಆದರೆ ಸೆಕ್ಷನ್ 27ರ ಪ್ರಕಾರ ಸಹ ಒಬ್ಬ ಟೆನೆಂಟ್ ಜಮೀನಿನ ವಾರ್ಷಿಕ ಕಂದಾಯದ 25 ರಷ್ಟನ್ನು ಕೊಟ್ಟುಬಿಟ್ಟರೆ ಆಗಲೂ ಸಹ ಆ ಟೆನೆಂಟ್ ಆ ಜಮೀನಿಗೆ ಖಾಯಂ ಅನುಭವದಾರನಾಗಬಹುದು. ಆಗ ಸರ್ಕಾರದವರು 19ನೆಯ ಸೆಕ್ಷನ್ ಪ್ರಕಾರ ಸಂಬಂಧಪಟ್ಟ ಸಂಸ್ಥೆಗಳಿಗೆ ತಸ್ದೀಕ್ ಕೊಡಬೇಕಾಗಿ ಬರುತ್ತದೆ. ಈಗ ಒಂದು ಹಳ್ಳಿಯಲ್ಲಿ ಉದಾಹರಣೆಗೆ ಹೇಳುವುದಾದರೆ ಒಂದು ದೇವಸ್ಥಾನಕ್ಕೆ ಐದು ಎಕರೆ ಜಮೀನಿದೆಯೆಂದು ಭಾವಿಸೋಣ. ಆ ಜಮೀನನ್ನು ಆತನು ವರ್ಷಂಪ್ರತಿ 10 ಪಲ್ಲ ಗುತ್ತಿಗೆ ಕೊಡುತ್ತಾನೆಂದು ಇಟ್ಟುಕೊಳ್ಳೋಣ. ಆಗ 1 ಪಲ್ಲ ದವಸಕ್ಕೆ 20 ರೂಪಾಯಿಗಳ ಪ್ರಕಾರ 10 ಪಲ್ಲಕ್ಕೂ 200 ರೂಪಾಯಿಗಳಾಯಿತು. ಆತನಿಗೆ ವರ್ಷಕ್ಕೆ ಕಂದಾಯ ಐದು ರೂಪಾಯಿಗಳ ಪ್ರಕಾರ ಐದು ಎಕರೆಗೆ 25 ರೂಪಾಯಿಗಳಾಗಬಹುದು. ಹೀಗೆ ಆತನಿಗೆ ಬರತಕ್ಕಂಥ ಇತರ ಖರ್ಚು ವೆಚ್ಚಗಳನ್ನೆಲ್ಲಾ ಕಳೆದು . . . .

ಶ್ರೀ ಕಡಿದಾಳ್ ಮಂಜಪ್ಪ.—ತಾವು ಚೆನ್ನಾಗಿ ಸೆಕ್ಷನ್ 25ನ್ನು ಓದಿ ನೋಡಿ.

ಶ್ರೀ ಟಿ. ಸಿ. ಬಸಪ್ಪ.—25ನೆಯ ಸೆಕ್ಷನ್ ಪ್ರಕಾರ ಒಬ್ಬ ಟೆನೆಂಟ್ ಸರ್ಕಾರದಿಂದ ಜಮೀನನ್ನು ಕೊಂಡುಕೊಂಡಮೇಲೆ ಅವನು ಆ ಜಮೀನಿನ ಮಾಲೀಕನಾಗುತ್ತಾನೆ. ನಾನು ಹೇಳುವುದು ಜಮೀನನ್ನು ಹೊಂದುವ ಮಾಲೀಕನ ವಿಚಾರವಲ್ಲ. ಸರ್ಕಾರಿ ಸಂಸ್ಥೆಗಳು ಎಂದರೆ ದೇವಸ್ಥಾನ ಮತ್ತು ಮಠಗಳಿಗೆ ಕೊಡುವ ತಸ್ದೀಕ್ ವಿಚಾರ. ಒಂದು ಸಾರಿ ರೈತ ಜಮೀನನ್ನು ಕೊಂಡಮೇಲೆ ಅವನು ಕಂದಾಯ ಮಾತ್ರ ಸರ್ಕಾರಕ್ಕೆ ಕೊಡುತ್ತಾನೆ. ಆದರೆ ಸರ್ಕಾರದವರು ಪ್ರತಿವರ್ಷವೂ ಮೇಲೆ ಹೇಳಿದ ಉದಾಹರಣೆಯಂತೆ ಸುಮಾರು 175 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇದು ಸರ್ಕಾರದ ಮೇಲ್ಗೆ ವೃಥಾ ಬೀಳತಕ್ಕಂಥ ಒಂದು ವಜೆಯೆಂದು ನಾನು ಹೇಳಬೇಕಾಗಿದೆ.

ಇನ್ನು ಎರಡನೆಯದಾಗಿ ಸೆಕ್ಷನ್ 27ರ ಪ್ರಕಾರ ಒಬ್ಬ ರೈತ ಒಂದು ಜಮೀನನ್ನು ತೆಗೆದುಕೊಳ್ಳಬೇಕಾದರೆ ತಾವು ಆತನಮೇಲೆ ಏನೇನು ನಿರ್ಬಂಧಗಳನ್ನು ಹಾಕಿದ್ದೀರಿ ಎಂದರೆ.

(i) "a sum equal to thirty-three and one-third times the difference between the rent and the land revenue of the land held by him as tenant; or

(ii) "a sum equal to twenty-five times the land revenue . . . . ."

ಇದರಂತೆ 25ರಷ್ಟು ಕಂದಾಯವನ್ನಾಗಲಿ ಅಥವಾ ಜಮೀನಿನ ಕೋರಿಗೂ ಕಂದಾಯಕ್ಕೂ ಇರುವ ವ್ಯತ್ಯಾಸದ $33\frac{1}{3}$ ರಷ್ಟು ಹಣವನ್ನಾಗಲಿ ಕೊಟ್ಟು ಜಮೀನನ್ನು ಕೊಂಡುಕೊಳ್ಳಲು ಯಾವ ರೈತನಿಗೂ ಅದು ಸಾಧ್ಯವಿಲ್ಲವೆಂದು ನಾನು ಹೇಳಬೇಕಾಗಿದೆ. ತಾವಿಲ್ಲಿ ಹೇಳಿರತಕ್ಕಂಥ ವ್ಯತ್ಯಾಸ ಕೂಡ ಬಹಳ ಹೆಚ್ಚಾಯಿತು. ಇದನ್ನೆಲ್ಲಾ ನೋಡಿದರೆ ತಾವು ರೈತನಿಗೆ ಜಮೀನನ್ನು ಕೊಡುವುದೇ ಒಂದು ದೊಡ್ಡ ಸಂಶಯಕ್ಕೆ ಗುರಿಯಾಗಿರುವಂತೆ ಕಾಣುತ್ತಿದೆ.

ಇನ್ನು ಮೂರನೆಯ ವಿಚಾರವಾಗಿ ಈ ಇನಾಂ ಜಮೀನುಗಳಲ್ಲಿರತಕ್ಕಂಥ ಕಟ್ಟಡಗಳ ವಿಚಾರ. ಈಗ ತಾವು ಇಲ್ಲಿ ಹೇಳಿರುವುದನ್ನು ನೋಡಿದರೆ ಇಲ್ಲಿಯವರೆಗೂ ಆ ರೈತನು ಇನಾಂ ಜಮೀನಿನಲ್ಲಿ ಕಟ್ಟಿಕೊಂಡು ಅನುಭವಿಸುತ್ತಿರತಕ್ಕಂಥ ಕಟ್ಟಡಗಳೆಲ್ಲ ಈ ಬಿಲ್ಲು ಜಾರಿಗೆ ಬಂದನಂತರ ಅವುಗಳ ಮಾಲೀಕತ್ವ ಇನಾಂದಾರನಿಗೇ ಹೋಗತಕ್ಕದ್ದಾಗಿರುತ್ತದೆಂದು ಹೇಳಲಾಗಿದೆ. ಆದರೆ ಇಂಥ ಕಟ್ಟಡಗಳನ್ನು ಟೆನೆಂಟ್ ಆಗಿದ್ದವನಿಗೆ ಸೇರುವಂತೆ ಮಾಡಲು ತಾವು ಯಾವ ಪ್ರಯತ್ನಗಳನ್ನೂ ಮಾಡಿರುವುದಿಲ್ಲ. ನನ್ನ ಉದ್ದೇಶ ಈ ಕಟ್ಟಡಗಳೆಲ್ಲವೂ ಈ ಟೆನೆಂಟ್ಸ್‌ಗಳಿಗೇ ಸೇರಬೇಕಾಗಿತ್ತು ಎಂದು. ಈಗಲೂ ಸಹ ಆ ರೀತಿ ಮಾಡಬೇಕೆಂಬುದು ನನ್ನ ಒಂದು ಸಲಹೆ. ಹೀಗೆ ಈ 1-2 ತಿದ್ದುಪಡಿಗಳನ್ನು ಮಾಡಿ ಈ ಬಿಲ್ಲನ್ನು ತಂದರೆ ಇದೊಂದು ಬಹಳ ಪ್ರಗತಿದಾಯಕವಾದ ಮಸೂದೆಯಾಗುತ್ತದೆಂದು ತಿಳಿಸಿ ನಾನು ಇದನ್ನು ಪುಷ್ಟೀಕರಿಸುತ್ತೇನೆ.

Sri H. C. LINGA REDDY (Malur).—This measure is a very progressive mile-stone in the history of land reforms. The other Bill—Personal and Miscellaneous Inams Abolition Bill—has been passed and has to receive the assent of the President. I have heard that a lot of correspondence is going on between the State Government and the Central Government. We can easily accept the suggestions made by the Planning Commission and the Central Government in

(SRI H. C. LINGA REDDY.)

respect of that Bill especially in view of the fact that we have accepted the suggestions made by them for incorporation in this Bill. I wish the same suggestions had come earlier when we were considering the other Bill—Personal and Miscellaneoues Inams Abolition Bill.

Mr. DEPUTY SPEAKER.—Anyhow, that is not before us now.

Sri H. C. LINGA REDDY.—At any rate, I hope that the Government would agree to the suggestions made by the Central Government for incorporation even in the other Bill before it is enacted into a law. Here the suggestions made by them are so progressive and so salutary, though my friend Sri Bheemappa Naik was arguing very vehemently against the suggestions made by the Planning Commission. I think the suggestions made by them are based on the principle that the tiller of the soil should become the owner of the soil as far as possible. They have suggested that there should be security of tenure of land and that there should be a fair return to the tenant tiller, and, even to the tenants-at-will very big concessions are made. In fact, when we were discussing the other Bill—Personal and Miscellaneous Inams Abolition Bill, we were not in a position even to go as far as the recommendations made in the Land Reforms Committee of Mr. H. B. Gundappa Gowda. But now I see that the Planning Commission have gone a step further and they have said that even the tenants-at-will should be given security of tenure and there should be fixity of rents and they have made that right of tenancy even heritable. I am glad that the members of the Select Committee have made up their mind to accept the suggestions made by the Planning Commission and they have accepted those salutary reforms suggested by the Planning Commission in the Select Committee Report.

But though I welcome this Bill so wholeheartedly, I have got to disagree with them in one or two respects. The definition of 'permanent tenant' in the original Bill was more comprehensive than the definition given here in the Select Committee Report. As Sri Basappa was pointing out, the definition of 'permanent tenant' was far wider in that any tenant who has been in possession of the occupancy of the land, who has been cultivating the land for a period of more than 12 years before the land vests in him would be a permanent tenant. Here they have restricted the definition and they have gone back to the definition given in the Land Revenue Code in section 79. Of course in the other Bill—Personal and Miscellaneous Inams Abolition Bill—which we discussed, the same enlarged definition has been given, but when there was a definition to the effect of deletion of another class of tenants or quasi-permanent tenants the original restricted definition was asserted in consideration of introducing another class of tenants, namely quasi-permanent tenants, but even here when the members of the Select Committee gave out a more comprehensive and wider definition of 'permanent tenant', I wish they had introduced the other class of quasi-permanent tenants here also as we did in the case of the other Bill—Personal and Miscellaneous Inams Abolition Bill. It follows logically but they have not done it. I wish that even now they include this class of tenants. The definition given for 'quasi-permanent tenant' was: that 'Any person who has been in possession and occupation of the land for a period of six years or more prior to 1st July 1947' was to be considered a quasi-permanent tenant. But here by restricting the definition of 'quasi-permanent tenant' you will be having tenants and a number of tenants-at-will. According to the other enlarged definition, the benefit could have gone to the category of tenants that come under permanent tenancy, but unfortunately when they restricted the definition of 'permanent tenant' here, following the restriction of 'permanent tenant' in the other Bill, I wish logically they should have intoduced the category of quasi-permanent tenants in this Bill also. Even now, it is not very late. I suggest to the Treasury Bench that the definition of the quasi-permanent tenant may be introduced so that a

large number of category of tenants may take benefit of it in acquiring the right of occupancy.

Mr. DEPUTY SPEAKER.—You may send in an amendment to that effect.

Sri H. C. LINGA REDDY.—Yes, Sir. That is why I am making that suggestion.

With regard to the acquisition of land by even the ordinary tenants-at-will, who became the tenants of the Government instead of the tenants of the inamdar, it is a very welcome feature that even a tenant-at-will, leave alone the quasi-permanent tenant, or permanent tenant, is enabled to acquire the ownership of land, provided he fulfils certain conditions. But when we give this concession to a tenant you should see that he gets the benefit and not that he is hampered in acquiring the ownership of land. Some of my friends, Sri Papanna and Sri T. C. Basappa, pointed out, I think, that it will be very difficult for a tenant to pay 33 1/3 times the difference of the rent and the land revenue. It will be a very big sum. He will not at any time be able to pay. "Or 25 times the land revenue, whichever is more" is mentioned here in section 27. I think it will be very beneficial and convenient to a tenant if it is made "whichever is less." "25 times the land revenue or 33 1/3 times the difference between the land revenue and the rent *whichever is less.*" If such an amendment is made, it will be very convenient and will be more useful to tenants to purchase occupancy rights and get themselves registered as occupants.

Sri Kadidal MANJAPPA.—What about the liability to the Government?

Sri H. C. LINGA REDDY.—Here, you have not provided for a quasi-permanent tenant and for any tenant to become a tenant under the restricted definition of the permanent tenant as contemplated under section 79 of the Land Revenue Code. It is so difficult. Therefore, even the quasi-permanent tenant will become the tenant-at-will. So many tenants who have cultivated the soil for such a long time, to pay such a heavy amount, will not be easy. So far as the liability of the Government is concerned, of course, the liability is there. That you may not avoid. Naturally the amount of Tasdik will also become less. We have got to satisfy ourselves with a lesser amount of Tasdik to the archak of the temple. With these remarks, I welcome the Bill.

*Sri S. SRINIVASA IYENGAR (T.-Narsipur).—Sir, I rise to offer my views on this Bill as reported by the Select Committee. The definition of the permanent tenant has been well defined. According to the Bill a permanent teant is one whose tenancy duration is co-extensive with that of the inamdar. So the number of permanent tenants will be very much less. That is one. Sir, there is another thing which I want to bring to the notice of the Government. According to the report of the Land Reforms Committee submitted by Mr. Gundappa Gowda, there are 19,702 cases of Devadaya comprising an acreage of 1,84,024 acres. And, the other type, the Dharmadaya, comprises of 431 cases, having an acreage of 2,40,079 acres. In all, this Bill applies to 20,133 cases and relates to 4,39,276 acres. In the morning the Hon'ble Minister for Revenue was pleased to furnish information that out of this acreage, the kadim tenant possesses 51,919 acres. And, he also expressed a doubt whether this acreage refers to both the categories. Anyway I have not the statistics ready. I presume the acreage might be a little more, and the permanent tenancy refers to about 30,861 acres.

Sri Kadidal MANJAPPA.—As defined in the original Bill.

Sri S. SRINIVASA IYENGAR.—As defined in the original Bill. There may be a little variation. I would not be wrong if I say that about 75,000 acres of land will be held both by the kadim tenant and the permanent tenant. Out of this acreage the Government is sure to get compensation amount or the price money from the permanent tenant to the tune of 25,000 acres. Sir, taking into consideration the total extent of acreage to which this Bill is applicable and that is Rs. 4·39 lakhs of acres, I want to place before this House that

(SRI S. SRINIVASA IYENGAR.)
the Government is going to get price money from about 3½ lakhs of acres. And, this price money differs according to the tenancy. The permanent tenant pays only twenty times the land revenue and he holds an acreage of only about 25,000 acres and the rest of the acreage of 4·39 lakhs of acres by the other tenants who have to be provided under clause 6. From the tenants-at-will who are cultivating the land and whose occupancy rights have to be registered, under this clause a huge sum of money is brought to the Government. So Government will not be in deficit.

Sri Kadidal MANJAPPA.—Regarding the acreage, I want to make a clarification. According to the latest figures, the total extent of land excluding Sringeri is 2,65,339 acres. Sringeri has 47,440 acres. These are the latest figures.

Sri S. SRINIVASA IYENGAR.—I will take the latest figures, Sir. Even assuming that the total acreage according to the latest figures is only two lakhs and odd acres, Government is going to get money from one-and-a-half lakhs of acres. Even in that, they have got two categories. The permanent tenant category forms a very small proportion to the total number of tenants. Majority of them are tenants-at-will. They have been provided under clause 6 of the Bill. The purchase-money that these tenants-at-will will have to give to Government to have occupancy rights is very heavy. Therefore, Government have these sources of revenue. Government continues to get the land revenue that was being paid by these kadim and permanent tenants. Government gets the purchase-money from both the permanent tenant and the tenant-at-will as provided under clause 6. Government will get all the revenues that the inamdar used to get under Forests, Fisheries, Tank Bed Cultivation, etc. All that revenue will be taken away from the Inamdar by the Government. So Government will be in a surplus position. There will never be any diminution in the finances of the State. On the other hand, there will be an addition to the finances of the State.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸರ್ಕಾರದಮುಂದೆ ಅಂಕಿ ಅಂಶಗಳೇನಾದರೂ ಇದ್ದರೆ, ಎಷ್ಟು ಹಣ ಬರುತ್ತದೆ ಎನ್ನುವುದನ್ನು ತಿಳಿಸುವುದು ಸೂಕ್ತ.

Sri S. SRINIVASA IYENGAR.—Sir, I was referring to the purchase-money that is to be paid by the class of tenants that have been brought under clause 6. I submit, Sir, that the section as contained in the Bill works as a very great hardship. I wish to illustrate it, Sir.

I come from T.-Narasipur. The average gutta per acre of land is about eight pallas of paddy, and the average rate of the market is taken into consideration as regards the price of the paddy. Since the Government is the land-lord, that class of tenants under Government surrender this gutta and deliver this rent to the Government. So the Government realise Rs. 160 per annum. Assuming that the water rate and other charges come to Rs. 10, the difference is Rs. 150. Suppose we follow the provision of this Bill, then, if that tenant wants to have his occupancy right registered, he will have to pay 33⅓ times this difference. It amounts to Rs. 5,000 per acre. No land has been sold till today at Rs. 5,000 per acre in T.-Narasipur Taluk. Therefore, I say that this price money is excessive. It may be brought down. That is No. 1.

Suppose a permanent tenant and a tenant provided under clause 6 were cultivating the land side by side, the permanent tenant is privileged to have his occupancy rights registered by paying Rs. 250 per acre, whereas the tenant provided under clause 6 is asked to pay Rs. 5,000 per acre. I feel that this difference is too much and it may be bridged to a certain extent.

Sir, the next thing I want to make a reference to is about clause 19. Clause 19 reads as follows:

> "Government shall pay to the inamdar every year so long as the institution exists as compensation for all the rights of the inamdar vesting in the State of Mysore

under this Act the basic annual sum as a tasdik allowance."

4 P.M.

So, the basic annual sum is the most important point. The basic annual sum is calculated according to the provisions of the Bill. What I find is, while calculating the basic annual sum, Government have taken steps to see that the recurring charges on the maintenance of irrigation projects are deducted. My point is, on the revenue side, the Government should have taken into consideration the investment made by the particular institution to introduce or construct those irrigation projects. Otherwise very little will be left over as basic value and institutions cannot survive. Therefore, I urge that the principles of calculation of basic value should be enlarged a little wider. In this connection, I would like to point out that the tasdik allowance that is proposed to be given to the Institution should be based not on the basic value but on the amount of money required to maintain the institution. There are many institutions in Mysore State. But the inam lands given to those institutions are enjoyed by people who are no longer in that village. For example, there are people living outside Mysore State and still enjoying lands of Mysore temples and their services are neglected. I feel, the object of the Government in introducing land reforms is two-fold. One is to see that the condition of the tenants of these lands is improved; the second object is to remove the intermediary. I do not stand in the way of both these objects being achieved. But at the same time, while doing so, I wish to request the Government to see that the institution from which these inams are taken are also made to work. If the tasdik allowance is calculated on the basic value, I can definitely say that many institutions cannot be worked because the basic value will be too little. In certain cases the basic value will be too much and in certain other cases, the basic value will be too little. Therefore, I submit that in computing the tasdik, the Government should follow a system by which these institutions are maintained. My friend Sri Bheemappa Naik has already supported my cause. I may be permitted to read his speech: It is like this:

"ದೇಶದಲ್ಲಿರತಕ್ಕ ಬಾಕಿ ದೇವಸ್ಥಾನಗಳು, ಸಂಸ್ಥೆಗಳು, ಅವರಿಗೆ ಎಷ್ಟು ಅನುಕೂಲತೆ ಇರುತ್ತದೆಯೋ ಅದಕ್ಕಿಂತ ಕಡಿಮೆ ಮಾಡಬೇಡಿ ಎಂದು ಹೇಳುತ್ತೇನೆ. ಈ ದಿವಸ ಅದರ ತತ್ವ ಘೋಷಣೆಮಾಡಿ ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡುಹೋಗುವುದು ಎಷ್ಟರಲ್ಲಿದೆಯೋ, ಅವರ ತತ್ವ ಘೋಷಣೆಮಾಡದೆ ನರಕದಲ್ಲಿದೂಡುವುದೂ ಅಷ್ಟರಲ್ಲೇ ಇದೆ. ಈ ದಿವಸದ ಪರಿಸ್ಥಿತಿ ಹೇಗಿದೆ ಎಂದರೆ ಈಗಿನ ವಿದ್ಯಾಭ್ಯಾಸದ ರೀತಿನೀತಿಯೇ ಬೇರೆ. ನೈತಿಕ ರೀತಿನೀತಿಯೇ ಬೇರೆ. ಆ ದೃಷ್ಟಿಯಿಂದ ಈ ದಿವಸ ಎಲ್ಲರಲ್ಲೂ ಅರಿಕೆಮಾಡಿಕೊಳ್ಳುವುದೇನೆಂದರೆ, ಈ ದೇವಸ್ಥಾನಗಳು ಮತ್ತು ಮತೀಯ ಸಂಸ್ಥೆಗಳು ಒಂದು ವಿಧದಲ್ಲಿ ಬಾಳಬೇಕು: ಅ ರೀತಿ ಬಾಳಿಬದ ಕುವುದಕ್ಕೆ ಇದರಲ್ಲಿ ಸಾಕಾದಷ್ಟು ರಕ್ಷಣೆ, ಅನುಕೂಲತೆ ಇದೆ. ಆದಾಯ ಅವರಿಗೆ ಬರುತ್ತದೆ. ಅದನ್ನು ಉಳಿಸಿಕೊಡಬೇಕೆಂಬ ಉದಾತ್ತವಾದ ಭಾವನೆಯಿಂದಲೇ ಮಾನ್ಯ ರೆವಿನ್ಯೂ ಸಚಿವರು ಇದನ್ನು ತಯಾರುಮಾಡುವಾಗ ಯೋಚಿಸಿದ್ದಾರೆ ಎಂದು ನನ್ನ ಭಾವನೆ."

ಶ್ರೀ ಎ. ಭೀಮಪ್ಪನಾಯಕ್.—ಮೊದಲು ಆ ಬಿಲ್ಲು ತಯಾರುಮಾಡಿದಾಗ ಹಾಗೆ ಇತ್ತು. Now better advice prevailed. ಆದ್ದರಿಂದ ಅದನ್ನು ಬಿಟ್ಟು ಬಿಟ್ಟಿದ್ದಾರೆ.

Sri S. SRINIVASA IYENGAR.—I wish to submit that the Committee on Land Revenue System have made this observation. Sri H. M. Channabasappa was a member of that Committee. The Report runs as follows:—

> "We therefore recommend that on the abolition of the inam tenure of inam villages held by religious, charitable or educational institutions the compensation payable in a lumpsum immediately or in instalments spread over five years, need not be determined but that Government should guarantee a net annual income adequate to meet the normal expenditure, based on the average expenditure of the ten years preceding the abolition of the Inam tenure."

The Congress Agrarian Reforms Committee have made the following recommendations:—

> "The provincial Government or the appropriate authority shall guarantee and provide for the income necessary for the fulfilment of the objectives of the Trust."

(SRI S. SRINIVASA IYENGAR.)

The Government have no doubt taken a very great step in introducing this land reform of guaranteeing or securing the tenancy tenure and enabling the tenant to acquire the ownership and occupancy rights. These are the two objectives which the Planning Commission have also suggested to the Government of Mysore. And also in the Seminar in Mysore, which myself, Sri G. A. Thimmappa Gowda and Sri Linga Reddy attended, there was a very big debate. In fact it was inclusive. The object, namely security of tenure, has been achieved by clause 6 according to which every tenant other than a kadim tenant or a permanent tenant shall be entitled to be continued as a tenant under the Government. The occupancy right of permanent tenants has also been achieved if he pays twenty times the land revenue. While achieving these objects, I would request the Government to amend this clause in such a manner as to see that the minimum amount required for the maintenance of these institutions is provided and that it should not be based on the basic value. If it is based on the basic value, then a particular institution may get more than it requires and another institution may not get even the amount necessary to maintain it. They will thus revert back to a position where some institutions will become defunct and some will prosper. These are cultural and social institutions, the inamdars being educational institutions, temples and all sorts of institutions. The question of archak does not come in here at all.

Next, Sir, coming to Chapter IV, I believe the provisions contained there work as a great hardship on the tenants brought under clause 6. I refer to this particular sentence on page 11:

"Provided that such heir or heirs pay the arrears of rent due."

This is in respect of clause 24 of Chapter IV. On the death of a tenant, this clause provides for registering the tenancy in the name of his heir or heirs and I entirely agree with it. It also says that it will only be done when arrears are paid before granting the tenure. That works as a hardship. The arrears due to Government will certainly be collected and I have no objection to that. But the collection must be made during the harvesting period. Tenancy right should not be denied just because there is arrear of rent. Somebody must cultivate the land. Instead of allowing somebody else to cultivate the land, why don't you allow the heir to do it? I therefore suggest that arrears of rent may be collected during the harvest period.

Further, I have some observations to make on clause 26 of the Bill on page 12. It relates to procedure for eviction and recovery of rent from a tenant who is a defaulter. Why should the Government provide for eviction? It is provided that the rent that is fixed should not exceed 50 per cent of the produce. The remaining 50 per cent belongs to the tenant. Suppose there is something due to the Government, then why should not they provide for attachment of his share of the crop and collect their revenue? Why should they provide for eviction? If he sublets, you can certainly evict him and nobody comes in the way. But so far as the collection of dues is concerned, that can be achieved by passing an attachment order and that is the best way of doing it.

Sri B. NARAYANASWAMY (Mysore South).—How do you know that he does not pay? Without knowing that how can you attach the property?

Sri S. SRINIVASA IYENGAR.—In a particular year, suppose a tenant is in arrears: for the recovery of the arrears you have provided for eviction. My point is, he should be allowed to cultivate the land and arrears must be collected by attaching the crop raised in the subsequent year after he becomes a defaulter. If eviction takes place, he becomes landless and there is no livelihood for him. The purpose is therefore not served. He must therefore be allowed to raise the crop in the land and then his crop may be attached for the arrears.

Sri D. DEVARAJ URS.—Not merely for non-payment of rent, but for so

many other things, eviction is provided.

Sri S. SRINIVASA IYENGAR.—For other things, I do not come in the way. Only as regards arrears due to Government, I made this suggestion. Sir, I feel that the Bill is absolutely necessary and I congratulate the Government for having introduced it in this session. I feel that the observations I have made need scrutiny and I therefore suggest that the Bill be referred back to the Select Committee to take these things into consideration and bring it again before this House for further consideration.

*ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಸೆಲೆಕ್ಟ್ ಕಮಿಟಿ ವರದಿ ಮಾಡಿರತಕ್ಕಂಥ Religious ಮತ್ತು Charitable ಇನಾಮುಗಳ ಬಿಲ್ಲಿನಮೇಲೆ ಈಗಾಗಲೇ ಮಾನ್ಯ ಸದಸ್ಯರು ತಮ್ಮ ಭಾಷಣಗಳನ್ನು ಮಾಡಿದ್ದಾರೆ. ಈ ಮಸೂದೆಗಳು ಕಾನೂನು ಆಗುವುದಕ್ಕೆ ಬಹಳ ವಿಳಂಬವಾಗುತ್ತಿದೆ ಎಂಬ ದೂರನ್ನು ನಾವು ಮಾಡಿದಾಗ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು "ಈಗ ವಿಳಂಬವಾಗುವುದಕ್ಕೆ ಸರಕಾರ ಮಾತ್ರ ಕಾರಣವಲ್ಲ, ವಿಧಾನ ಸಭಾ ಸದಸ್ಯರೂ ಕೂಡ ಕಾರಣ" ಎಂದು. ಈ ಪ್ರಜಾ ಪ್ರಭುತ್ವ ತತ್ವವನ್ನು ಪರಿಪಾಲನೆ ಮಾಡತಕ್ಕಂಥ ತಾವೂ, ತಮ್ಮ ಪಕ್ಷದವರೂ ಆ ಕಾನೂನಿನ ಅಗತ್ಯವನ್ನು ಮನಗಂಡು ತಮ್ಮ ಭಿನ್ನಾಭಿಪ್ರಾಯಗಳು ವಿಧಾನ ಸಭೆಗೆ ಬರುವುದಕ್ಕೆ ಮುಂಚೆ ಅವುಗಳನ್ನು ಪರಿಹರಿಸಿಕೊಂಡು ನಿಮ್ಮ ಪಕ್ಷ ಎಷ್ಟರಮಟ್ಟಿಗೆ ಪ್ರಗತಿದಾಯಕವಾದ ಒಂದು ಮಸೂದೆಯ ಕಾನೂನನ್ನು ಮಂಡಿಸಬಹುದೋ ಅಷ್ಟು ಮಾತ್ರ ಪ್ರಯತ್ನಪಟ್ಟು ಕಾಲ ಹೆಚ್ಚು ವಿಳಂಬವಾಗುವುದಕ್ಕೆ ಮುಂಚೆ ಇಂತಹ ಸುಧಾರಣೆಗಳನ್ನು ತರುವುದರಿಂದ ಸುಧಾರಣೆಗಳ ಉದ್ದೇಶ ಸಾರ್ಥಕವಾಗುತ್ತದೆಯೇ ಹೊರತು ಈ ರೀತಿಯಲ್ಲಿ ಮಸೂದೆಗಳನ್ನು ಮಂಡಿಸಿ ಅವು ಕಾರ್ಯರೂಪಕ್ಕೆ ಬರುವುದಕ್ಕೆ 4-5-6-10 ವರ್ಷಗಳಾದರೆ ಆಗ ಅಂತಹ ಮಸೂದೆಗಳನ್ನು ತರುವ ಉದ್ದೇಶ ಸಾರ್ಥಕವಾಗುವುದಿಲ್ಲ. ಈ ವಿಷಯದಲ್ಲಿ ನಮ್ಮ ಪಕ್ಷದ ಸದಸ್ಯರು ಯಾರೂ ಈ ರೀತಿ dilatory tactics ಅನ್ನು ಈ ಭೂಸುಧಾರಣೆಗಳನ್ನು ಮಸೂದೆಗಳ ಸಂದರ್ಭದಲ್ಲಿ ಮಾಡಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

Mr. DEPUTY SPEAKER.—The Member must confine his remarks to the report of the Select Committee.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯದ ಬಗ್ಗೆ ಮಾತನಾಡುತ್ತಾ, ಮಾನ್ಯ ಮಂತ್ರಿ ಅಪ್ಪಣೆ ಕೊಡಿಸಿದರು, ಹೀಗೆಯೇ ನಮ್ಮೆಲ್ಲರ ಜವಾಬ್ದಾರಿ ಇದೆ . . .

Mr. DEPUTY SPEAKER.—The Member can make these general remarks at the time of making general observations on the Budget. He must confine his remarks to the report of the Select Committee.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದು ಭಯ ನನಗೆ ಏನು ಎಂದರೆ, ಈ ವರದಿ circulate ಆಗಬೇಕು ಎಂಬ ಅಭಿಪ್ರಾಯವನ್ನು ಇಟ್ಟುಕೊಂಡಿರತಕ್ಕಂಥ ಸದಸ್ಯರೂ ಕೂಡ ಆಳುವ ಪಕ್ಷದಲ್ಲಿದ್ದಾರೆ. ಆದರೆ ಈ ಬಿಲ್ ಎಷ್ಟು ಕಾಲದಿಂದ ಈ ಸಭೆ ಮುಂದೆ ಇದೆ ಎಂಬುದನ್ನು ನಾನು ಮತ್ತೆ ಹೇಳಬೇಕಾದ್ದಿಲ್ಲ. ಇದೇ ಸಂದರ್ಭದಲ್ಲಿ ನಾನು ಈ ಸಭೆಯ ಜ್ಞಾಪಕಕ್ಕೆ ತರುವುದಾದರೆ, ಇದರ ಜೊತೆಯಲ್ಲಿ, ಈ ಸಭೆಯಲ್ಲಿ ಒಂದು ಮಂಜೂರಾದ ಮತ್ತೊಂದು ನಮಗೆ ಸಂಬಂಧಪಟ್ಟ ಮಸೂದೆ ಇನ್ನೂ ರಾಷ್ಟ್ರಾಧ್ಯಕ್ಷರ ಟೇಬಲ್‌ಮೇಲೆ ರುಜು ಆಗದೆ ಕುಳಿತಿದೆ ಎಂದು ಹೇಳಿದರೆ ಅದೂ ಕೂಡ ಈ ಪ್ರಜಾ ಪ್ರಭುತ್ವ ನಮ್ಮ ದೇಶದಲ್ಲಿ ಎಷ್ಟುಮಟ್ಟಿಗೆ ಜನತೆಯ ಆವಶ್ಯಕತೆಗಳನ್ನು ಪೂರೈಸುತ್ತಾ ಇದೆ. ಎನ್ನುವುದಕ್ಕೆ ಒಂದು ಸಾಕ್ಷಿಯಾಗಿದೆ. ಈ ಮಸೂದೆಯಲ್ಲಿ ಒಳಗೊಂಡಿರತಕ್ಕಂಥ ಮೂಲ ತತ್ವಗಳಲ್ಲಿ ಭಿನ್ನಾಭಿಪ್ರಾಯವನ್ನು ಯಾರೂ ವ್ಯಕ್ತಪಡಿಸುವಷ್ಟು ಧೈರ್ಯ ಮಾಡಿಲ್ಲ. ಏಕೆಂದರೆ, ಈ ದಿನ ಇಂಥ ಒಂದು ಮಸೂದೆಯನ್ನು ವಿರೋಧಿಸಿದರೆ 'ತೀರಾ ಪ್ರತಿಗಾಮಿ ಮನುಷ್ಯ' ಎಂದು ತನ್ನ ರೂಪ-ಬಣ್ಣ ಹೊರಗೆ ಬರುತ್ತದೆಂದು ಹೇಳಿ ಯಾರೂ ಇದನ್ನು ವಿರೋಧಿಸುವ ತಂಟೆಗೆ ಹೋಗುವುದಿಲ್ಲ. ಆದರೆ ಕಾರ್ಯತಃ ಜಾರಿಗೆ ತರದಿರುವ ರೀತಿಯಲ್ಲಿ ಯಾವ ಯಾವ ರೀತಿ ವರ್ತಿಸಬಹುದೋ ಆ ರೀತಿಯೆಲ್ಲಾ ವರ್ತಿಸಿಕೊಂಡು ಜಾರಿಗೆ ಬಾರದಿರುವ ಹಾಗೆ ಮಾಡುವುದಕ್ಕೆ ಸಾಧ್ಯ; ಆ ರೀತಿ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ: ಈ ಮಸೂದೆ ಬಹಳ ಹಿಂದೆಯೇ ಬರಬೇಕಾಗಿತ್ತು. ಗುಂಡಪ್ಪಗೌಡರ ಕಮಿಟಿಯ ರಿಪೋರ್ಟ್ ಬಂದು, ಅದರ ನಂತರದಲ್ಲಿ 1947ನೆಯ ಇಸವಿಯಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ಒಂದೆರಡು ವರ್ಷದಲ್ಲೇ ಇದನ್ನು ನಾವುಗಳು ನಿರೀಕ್ಷಿಸಿದ್ದೆವು. ಆದರೆ ಬರಲಿಲ್ಲ! ಇದರಿಂದೇನಾಗಿದೆಯೆಂದರೆ, ಅನೇಕ ಜನ ರೈತರು ತಮ್ಮ ಭೂಮಿಯನ್ನು ಈಗಾಗಲೇ ಕಳೆದುಕೊಂಡಿದ್ದಾರೆ; ಇವೊತ್ತಿಗೂ, ಪ್ರತಿಕ್ಷಣದಲ್ಲೂ ಇದು ನಡೆಯುತ್ತಿದೆ. ಇನಾಂಗಳಲ್ಲಿ ಮಾತ್ರವಲ್ಲ, ಸರ್ಕಾರಿ ಜಮೀನುಗಳಲ್ಲೂ ನಡೆಯುತ್ತಿದೆ. ಕಾರಣ, ಪರ್ಮನೆಂಟ್ ಟೆನೆಂಟ್‌ಗಳೆಂದು ಏನು ನೀವು ಕರೆದಿದ್ದೀರಿ, ಅವರಿಗೆ ತಮ್ಮ ಹಕ್ಕನ್ನು ಸಾಧಿಸುವುದಕ್ಕೆ ಕಾಗದ ಪತ್ರಗಳೇನೂ ಇರುವುದಿಲ್ಲ. ಹುಟ್ಟಿದಾರಭ್ಯ ಆತ ಕೃಷಿ ಮಾಡುತ್ತಿದ್ದರೂ, "ಎಷ್ಟು ವರ್ಷದಿಂದ ಮಾಡುತ್ತಿದ್ದೀಯಾ! ನಿನ್ನ ಹಕ್ಕುಬಾಧ್ಯತೆಗಳಿಗೇನಾದರೂ ಸಾಕ್ಷಿಯಿದೆಯೇ!" ಎಂದರೆ ಏನೂ ಇಲ್ಲ! ಅವನ ತಂದೆ ಹಾಕಿರುವ ತೆಂಗಿನ ಮರವೋ ಅಥವಾ ಇನ್ನಾವುದಾದರೂ ನಿರ್ಜೀವ ವಸ್ತುವೋ ಸಾಕ್ಷಿ ಹೇಳಬೇಕು, ಅಷ್ಟೇ! ಮತ್ತೇನೂ ಸಾಕ್ಷ್ಯವಿರುವುದಿಲ್ಲ.

ಈ ಸಂದರ್ಭದಲ್ಲಿ ಈ ವರದಿ ಸೆಲೆಕ್ಟ್ ಕಮಿಟಿಯಿಂದ ಹೊರಗೆ ಬರುವಾಗ ಕೆಲವು ಬದಲಾವಣೆಗಳನ್ನೊಳಗೊಂಡಿವೆ. ಈ ಬದಲಾವಣೆಗಳು ಎಷ್ಟರಮಟ್ಟಿಗೆ ರೈತರಿಗೆ ಸಹಾಯಕವಾಗಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟೆ. ಅಷ್ಟೇನೂ ಸಹಾಯಕವಾಗಿಲ್ಲವಲ್ಲಾ ಎಂದು ನನಗೆ ವ್ಯಸನವಾಗುತ್ತದೆ. ಮೂಲ ಬಿಲ್ಲಿನಲ್ಲಿದ್ದ ಪ್ರಾವಿಷನ್‌ಗಳನ್ನೂ ಈಗ ಇಲ್ಲಿ ಅಳವಡಿಸಿರುವ ಪ್ರಾವಿಷನ್‌ಗಳನ್ನೂ ನೋಡಿದರೆ, ಶ್ರೀಮಾನ್ ಲಿಂಗಾರೆಡ್ಡಿಯವರು ಏನು ಹೇಳಿದರೋ ಅದೇ ಅಭಿಪ್ರಾಯವನ್ನು ನಾನೂ ಕೂಡ ಹೇಳಬೇಕಾಗುತ್ತದೆ. ಪರ್ಮನೆಂಟ್ ಟೆನೆಂಟ್ ಎಂದು ಬಿಲ್ಲಿನಲ್ಲಿದ್ದುದನ್ನು ತಿದ್ದುಪಡಿಮಾಡಿ ಲ್ಯಾಂಡ್ ರೆವಿನ್ಯೂ ಕೋಡಿನ 79ನೆಯ ಸೆಕ್ಷನ್‌ಪ್ರಕಾರ ಇರತಕ್ಕ ಪರ್ಮನೆಂಟ್ ಟೆನೆಂಟು ಅಥವಾ ಇನಾಂದಾರನಂತೆ Co-extensive

(ಶ್ರೀ ಎಸ್. ಗೋಪಾಲಗೌಡ)

ಆಗಿ, ಸಂಪೂರ್ಣವಾಗಿ ಮೊದಲಿನಿಂದ ಕೊನೆಯವರೆಗೂ ಅನುಭವಿಸಿಕೊಂಡು ಬಂದಿರತಕ್ಕವನು ಪರ್ಮನೆಂಟ್ ಟೆನೆಂಟು ಎಂದು ಹೇಳಿದ್ದೀರಿ. ಹೀಗೆ ಮಾಡಿರುವುದರಿಂದ ಮಾನ್ಯ ಮಂತ್ರಿಗಳು ಹೇಳಿದಹಾಗೆ ಶೇಕಡ 25 ಅಥವಾ ಅದಕ್ಕೂ ಕಡಮೆಯಾದ ಸಂಖ್ಯೆಯಷ್ಟು ಮಟ್ಟಿಗೆ, ಹಿಂದಿನ ಮಸೂದೆಯಲ್ಲಿ ಪರ್ಮನೆಂಟ್ ಟೆನೆಂಟ್ ಎಂದು ಯಾರನ್ನು ಕರೆದಿದ್ದೆವೋ, ಆಗ ಎಷ್ಟು ಭೂಮಿಯನ್ನು ಪರ್ಮನೆಂಟ್ ಟೆನೆಂಟುಗಳಿಗೆ ಬಿಡುತ್ತಿದ್ದೆವೋ ಅದು ಕಡಮೆಯಾಗುತ್ತದೆ. ಆದ್ದರಿಂದ ಈ ಮಸೂದೆಯಿಂದ ಪರ್ಮನೆಂಟ್ ಟೆನೆಂಟ್ ಎನ್ನಿಸಿಕೊಳ್ಳುವುದಕ್ಕೆ ಹೆಚ್ಚಿನ ಅವಕಾಶ ಸಿಕ್ಕುವುದಿಲ್ಲ.

ಇನ್ನೊಂದೇನೆಂದರೆ, ಕ್ವಾಸಿ ಪರ್ಮನೆಂಟ್ ಟೆನೆಂಟ್ ಎಂದು ಅದರಲ್ಲಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ಕ್ವಾಸಿ ಟೆನೆಂಟು ಅದರಲ್ಲಿಲ್ಲ, ಆದರೆ ಹಿಂದಿನದರಲ್ಲಿತ್ತು.

ಶ್ರೀ ಎಸ್. ಗೋಪಾಲಗೌಡ.—ಹೌದು, ಅದರಲ್ಲಿರಲಿಲ್ಲ, ಹಿಂದಿನದರಲ್ಲಿತ್ತು. ಇದರಲ್ಲೂ ಅದನ್ನು ಸೇರಿಸಬಹುದಾಗಿತ್ತು. ಆದರೂ, ಮಾನ್ಯ ಮಂತ್ರಿಗಳು ಹೇಳುವಾಗ, "ಈ ಬಿಲ್ಲು ಮತ್ತೂ ಪ್ರಗತಿದಾಯಕವಾಗಿದೆ, ಕ್ವಾಸಿ ಟೆನೆಂಟುಗಳು ಮತ್ತು ಟೆನೆಂಟ್ಸ್ ಎಟ್‌ವಿಲ್‌ಗಳನ್ನೆಲ್ಲಾ ಕೈಬಿಟ್ಟಿದ್ದೆವು. ಈಗ ಪ್ಲಾನಿಂಗ್ ಕಮಿಷನ್ನಿನವರು ಹಾಗೆ ಕೈಬಿಡುವುದು ಸರಿಯಲ್ಲವೆಂದು ಹೇಳಿದಮೇಲೆ ನಾವು ಅದನ್ನೂ ಸೇರಿಸಿಕೊಂಡು ಮತ್ತಷ್ಟು ಪ್ರಗತಿಪರವಾಗಿ ಮಾಡಿದ್ದೇವೆ" ಎಂದು ಹೇಳಿದರು. ಅದನ್ನೂ ನೋಡೋಣ. ಪ್ಲಾನಿಂಗ್ ಕಮಿಷನ್ನಿನವರ ಬುದ್ಧಿವಾದದ ಪ್ರಕಾರ ಮಾಡಿರುವುದು ಎಷ್ಟರಮಟ್ಟಿಗೆ ಪ್ರಗತಿಪರವಾಗಿದೆಯೆಂದರೆ—ಏನೂ ಪ್ರಗತಿಪರವಾಗಿಲ್ಲ !! ಅಲ್ಲಿ ಇನಾಂದಾರರಿಗೆ ಎಷ್ಟು ಗುತ್ತಿಗೆ ಕೊಡಬೇಕಾಗಿತ್ತೋ ಅಷ್ಟೇ ಗುತ್ತಿಗೆಯನ್ನು ಈಗ ಸರ್ಕಾರಕ್ಕೆ ಕೊಡಲೇಬೇಕು ; ರೈತನಿಗೆ ಯಾವುದೊಂದು ರಿಯಾಯ್ತಿಯಾಗಲಿ, ಕಡಮೆಮಾಡತಕ್ಕದ್ದಾಗಲಿ ಇಲ್ಲಿ ಕಾಣಲಿಲ್ಲ. ಇದರಲ್ಲಿ ಏನು ಹೇಳುತ್ತಾರೆ?—ಟೆನೆನ್ಸಿ ಕಾನೂನಿಗೆ ಹೆಚ್ಚದಂತೆ ಅಂದರೆ Main Crop ನಲ್ಲಿ ಅರ್ಧಕ್ಕಿಂತ ಹೆಚ್ಚದಂತೆ ಸರ್ಕಾರಕ್ಕೆ ಕೊಡಬೇಕೆಂದು ಹೇಳಿದ್ದಾರೆ. ಈಗಿರುವ ಪ್ರಕಾರ ಟೆನೆನ್ಸಿ ಕಾನೂನಿನ ಪ್ರಕಾರ ½ ಭಾಗ ಕೊಡಬೇಕೆಂದು ನಾವೆಲ್ಲಾ ಒಪ್ಪಿಕೊಂಡಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ಟೆನೆನ್ಸಿ ಕಾನೂನಿನಲ್ಲೂ ಅರ್ಧಕ್ಕಿಂತ ಹೆಚ್ಚದಂತೆ ತೆಗೆದುಕೊಳ್ಳಬಹುದೆಂದಿದೆ.

ಶ್ರೀ ಎಸ್. ಗೋಪಾಲಗೌಡ.—'ಅರ್ಧಕ್ಕಿಂತ ಹೆಚ್ಚದಂತೆ' ಎಂದು ಇದ್ದರೂ ನಮ್ಮ ಕಡೆಯಲ್ಲಿ 1/3 ಭಾಗ ಎಂದು ಮಾಡಿಕೊಂಡಿದ್ದಾರೆ.

ಈಗ ನಾವುಗಳು 1/3 ಭಾಗವೂ ಹೆಚ್ಚೆಂದು ಹೇಳುವಾಗ, ಅದರಲ್ಲೂ ಬೊಂಬಾಯಿನಲ್ಲಿ 1 6 ಭಾಗಮಾತ್ರ ಭೂಸ್ವಾಮಿಗೆ ಕೊಟ್ಟರೆ ಸಾಕು ಎಂದು ಹೇಳುವಾಗ, ಇದರಲ್ಲಿ ಟೆನೆಂಟು ತಾನು ಬೆಳೆದ ಎಲ್ಲಾ ದವಸಕ್ಕೂ ತಾನೇ ಸ್ವಾಮಿಯಲ್ಲ ಎಂದು ಕೇಳುವ ಪಾಳೆಯಗಾರರಿದ್ದಾರೆಂದೂ ಗೊತ್ತಾಗುತ್ತದೆ. ಆದ್ದರಿಂದ ಸರ್ಕಾರ, ತಾವು ಉತ್ತಮಪಡಿಸಿದ್ದೇವೆ ಎಂದು ಹೇಳುತ್ತಿದ್ದಾರಲ್ಲಾ ಏನು ಉತ್ತಮಪಡಿಸಿದ್ದಾರೋ ನನಗಂತೂ ಅರ್ಥವಾಗಲಿಲ್ಲ. ಇದರ ಪ್ರಕಾರ ಸರ್ಕಾರವು ಅರ್ಧಕ್ಕೆ ಮೀರದಷ್ಟರಷ್ಟು ಬೆಳೆಗೆ ಪಾಲುಗಾರನಾಗುವುದರಿಂದ ರೈತನಿಗೆ ಯಾವ ರೀತಿಯಲ್ಲೂ ಉಪಕಾರವಾಗಲಿಲ್ಲವೆಂದು ನಾವು ಹೇಳಬಹುದಾಗಿದೆ.

ಶ್ರೀ ಟಿ. ಎನ್. ಮುಡಲಗಿರಿಗೌಡ.—ಇದು ಮೊದಲನೆಯ ಹಂತ ; ಆಮೇಲೆ ನೋಡೋಣ.

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ಕೊಂಡುಕೊಳ್ಳುವುದಕ್ಕೂ ಕೂಡ ಅವಕಾಶಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಅದನ್ನು ಯಾವ ರೀತಿ ಕೊಂಡುಕೊಳ್ಳುತ್ತಾರೋ ನನಗೆ ಗೊತ್ತಾಗುವುದಿಲ್ಲ. ಏಕೆಂದರೆ, ಇವೊತ್ತು ಗೇಣಿದಾರನ ಪರಿಸ್ಥಿತಿ ಯಾವರೀತಿಯಿದೆಯೆಂದು ನೋಡಿದರೆ, ಈ ಹೊತ್ತು ಕೊಡಬೇಕಾಗಿರತಕ್ಕ ಗೇಣಿ ಉಳಿದರೆ ಹೇಗೋ ತನ್ನ ಹೆಂಡತಿ ಮಕ್ಕಳನ್ನು 12 ತಿಂಗಳು ಸಾಕಿಕೊಂಡೇನು ಎಂದು ಹೇಳುವ ಸ್ಥಿತಿಯಲ್ಲಿದ್ದಾನೆ. ಅಂಥಾದ್ದರಲ್ಲಿ ಇವೊತ್ತು ಅವನು ಕೊಂಡುಕೊಳ್ಳಬೇಕು ಎಂದರೆ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಲೆಕ್ಕಹಾಕಿ ಹೇಳಿದಹಾಗೆ ಒಂದು ಎಕರೆಗೆ 5,000 ರೂಪಾಯಿಗಳನ್ನು ಕೊಟ್ಟು ಕೊಂಡಾನೇ ? ಇದನ್ನು ತೋರಿಸಿ ಕಂದಾಯದ ಮಂತ್ರಿಗಳನ್ನು ಕೇಳಿದ್ದಕ್ಕೆ ಆತನು ಕೊಂಡುಕೊಳ್ಳಬಾರದೆಂತಲೇ ಹಾಗೆ ಮಾಡಿದ್ದೇವೆ ಎಂದು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಹಾಗೆ ಹೇಳಲಿಲ್ಲ. ಇದನ್ನು ಕಡಿಮೆ ಮಾಡಿದರೆ ಸರ್ಕಾರಕ್ಕೆ liability ಜಾಸ್ತಿಯಾಗುತ್ತದೆ ಎಂದು ಹೇಳಿದೆನೇ ಹೊರತು ಅವರು ಕೊಂಡುಕೊಳ್ಳಕೂಡದು ಎಂದು ಹೇಳಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಬಾಕಿ ಸದಸ್ಯರು ಅವರು ಹೇಗೆ ಕೊಂಡುಕೊಳ್ಳುತ್ತಾರೆ ಎಂದು ಕೇಳಿದ್ದಕ್ಕೆ ತಾವೇನೋ ಹೇಳಿದಿರಿ ; ಕೊಂಡುಕೊಳ್ಳಬಾರದೆಂತಲೇ ಮಾಡಿದ್ದೇವೆ ಎಂದು ಒಂದುವೇಳೆ ಹೇಳದೆ ಇದ್ದರೂ, ಈ ರೀತಿ 5,000 ರೂಪಾಯಿಗಳನ್ನು ತಾವು ಗೊತ್ತುಮಾಡಿದಮೇಲೆ ಅವನು ಕೊಂಡುಕೊಳ್ಳುವ ಹಾಗೆಯೇ ಇಲ್ಲ. ಆದ್ದರಿಂದ ಈ ಮಸೂದೆಯಲ್ಲಿ tenants-at-willಗಳು ಭೂಮಿಯ ownerಗಳಾಗಬಹುದೆಂದು ಹೇಳಿರುವಹಾಗೆ ಆಗುವುದಕ್ಕೆ ಸಾಧ್ಯವೇ ಇಲ್ಲ. ಅವರು 5,000 ರೂಪಾಯಿಗಳನ್ನು. . .

ಒಬ್ಬ ಸದಸ್ಯರು.—'5,000 ರೂಪಾಯಿ' ಎಂದು ಎಲ್ಲಿ ಹೇಳಿದೆ ?

ಶ್ರೀ ಎಸ್. ಗೋಪಾಲಗೌಡ.—ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಆಗಲೇ ಲೆಕ್ಕಹಾಕಿ ಹೇಳಿದರಲ್ಲಾ.

ಶ್ರೀ ಎ. ಭೀಮಪ್ಪನಾಯಕರು.—ಶ್ರೀನಿವಾಸಯ್ಯಂಗಾರ್‌ರವರ ಊರಿನಲ್ಲಿ ಯಾವುದೋ ಒಂದು ಕೆರೆಯ ಕೆಳಗಿನ ಜಮೀನಿಗೆ ಎಕರೆಗೆ 5,000 ರೂಪಾಯಿಗಳಾಗಬಹುದು. ಬೇರೆಕಡೆ ಎಕರೆಗೆ ಒಂದು ಪಲ್ಲಾ 15 ಸೇರು ಹೀಗೆಲ್ಲಾ ಗುತ್ತಿಗೆ ಇರುತ್ತದೆ !

ಶ್ರೀ ಎಸ್. ಗೋಪಾಲಗೌಡ.—5,000 ಅಲ್ಲದಿದ್ದರೆ, ಅದರ ಅರ್ಧವಾದರೂ ಕಟ್ಟಿಕೊಳ್ಳೋಣ. ಅಷ್ಟಾದರೂ, ಯಾರು ಟೆನೆಂಟ್ ಎನಿಸಿಕೊಳ್ಳುವವನು ಕೊಂಡುಕೊಳ್ಳುವುದಕ್ಕೆ ಶಕ್ತನಾದಾನು ? ಬೇರೆ ವ್ಯಾಪಾರವನ್ನೋ ಇನ್ನೇನನ್ನಾದರೂ ಮಾಡುತ್ತಿದ್ದರೆ ಅಂಥವನಿಗೆ ಪರವಾಯಿಲ್ಲ. ಆದ್ದರಿಂದ, ಕಾನೂನು ಮಾಡುವಾಗ ಯಾವುದೋ ಒಂದುಕಡೆ ಅಂಥ ಬೆಲೆ ಬರುತ್ತದೆಂಬದನ್ನು ಯೋಚನೆ ಮಾಡದೆ, ಸಂಸ್ಥಾನಾದ್ಯಂತ ಅನ್ವಯವಾಗುವಹಾಗೆ ಮಾಡಬೇಕು. ಆಮೇಲೆ ಬೇಕಾದರೆ exceptionಗಳನ್ನು ಮಾಡಿ. ಹೀಗಾಗಿ, ಈಗ ಟೆನೆಂಟ್ಸ್ ಎಂದು ಯಾರು ಇನಾಂದಾರರ ಆಡಳಿತದಲ್ಲಿದ್ದಾರೋ ಅವರು ಪುನಃ ಸರ್ಕಾರದ ಕೈಕೆಳಗೆ ಟೆನೆಂಟುಗಳಾಗಿಯೇ ಮುಂದುವರಿದು ನಿಮ್ಮ ಷರತ್ತುಗಳಂತೆ ಕೊಂಡುಕೊಳ್ಳುವುದಕ್ಕೆ ಎಂದೂ ಶಕ್ತರಾಗದೆ ಟೆನೆಂಟುಗಳಾಗಿಯೇ ಉಳಿಯುತ್ತಾರೆ. ಆದ್ದರಿಂದ ಈ ಭೂಮಿಯ ಹಂಚಿಕೆಯಲ್ಲಿ ಉಳುಮೆ ಮಾಡುವವನಿಗೆ

ಭೂಮಿ ದೊರಕುತ್ತದೆಂದು ಆಶಿಸುವುದು ತಪ್ಪು. ಅಲ್ಲ, ಇಲ್ಲ ನೀವು ಪ್ರೀಮಿಯಮ್ಮನ್ನು ಎಷ್ಟೋ ಕೊಡಬೇಕಾಗುತ್ತದೆ. ನೀವು ನಿಗದಿಮಾಡಿರುವ ಹಣ ಬಹಳ ಜಾಸ್ತಿ.

ಉಪಾಧ್ಯಕ್ಷರು.—Amendmentನ್ನು ಕಳುಹಿಸಿ move ಮಾಡಿದರೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಅದಾಗುತ್ತದೆ. ಒಟ್ಟಿನಲ್ಲಿ ಈ ಬಿಲ್ಲಿನಲ್ಲಿ ಅಷ್ಟೇನೂ ಬದಲಾವಣೆಯಾಗಿಲ್ಲ. ಅಲ್ಪಸ್ವಲ್ಪ ಬದಲಾವಣೆಯಾಗಿರುವುದೂ ರೈತರಿಗೆ ಅನುಕೂಲವಾಗಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಈ ಬಿಲ್ಲಿನಲ್ಲಿ 'whichever is less' ಎಂದು adopt ಮಾಡಿಕೊಂಡರೆ, ಆಗ್ಗೆ ಟೆನೆಂಟುಗಳಿಗೆ, ಯಾರಿಗೆ ನಾವು ಜಮೀನುಕೊಡುತ್ತೇವೋ ಅವರಿಗೆ ಕಾರ್ಯತಃ ಕೊಂಡುಕೊಳ್ಳುವುದಕ್ಕೆ ಸಾಧ್ಯವಾದೀತು.

ಆಮೇಲೆ, ಶ್ರೀನಿವಾಸಯ್ಯಂಗಾರ್‌ರವರು ಶ್ರೀಮಾನ್ ಭೀಮಪ್ಪನಾಯಕರಿಗೆ ಉತ್ತರವಾಗಿ ಒಂದು ಅಭಿಪ್ರಾಯ ಹೇಳಿದರು. ಹಣವನ್ನು ನಾವೇನೂ ಟ್ರೆಜರಿಯಿಂದ ಹೊಸದಾಗಿ ತೆಗೆದು ಕೊಡಬೇಕಾದ್ದಿಲ್ಲ; ರೈತರು ಕೊಂಡುಕೊಳ್ಳುವುದರಿಂದ ಮತ್ತು ಸರ್ಕಾರಕ್ಕೆ ಹೆಚ್ಚಿಗೆ ಗೇಣಿಬರುವುದರಿಂದ ಸರ್ಕಾರಕ್ಕೆ ಹಣಬರುತ್ತದೆ, ಆ ಹಣದಲ್ಲೇ ನಾವು ಸಂಸ್ಥೆಗಳಿಗೆ ತಸ್ತೀಕ್ ಮುಂತಾದುವುಗಳನ್ನು ಕೊಟ್ಟು ನಡೆಸಿಕೊಂಡು ಹೋಗಬಹುದು ಎಂದು ಹೇಳಿದರು. ಈ ಪ್ರಕಾರ ಲೆಕ್ಕಹಾಕಿ, ತಸ್ತೀಕನ್ನು ಗೊತ್ತು ಮಾಡುವಾಗ 5 ವರ್ಷದ ಸರಾಸರಿ ಆದಾಯ ನೋಡಿಕೊಂಡು ಲೆಕ್ಕಹಾಕಿದರೆ, ಅನೇಕ ಸಂಸ್ಥೆಗಳಿಗೆ ಸಾಕಾದಷ್ಟು ಹಣ ದೊರೆಯದೆ ಹೋಗಬಹುದು. ಆದ್ದರಿಂದ ಆಯಾ ಸಂಸ್ಥೆಗಳಿಗೆ ಅವುಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಎಷ್ಟೆಷ್ಟು ಹಣ ಬೇಕಾಗುತ್ತದೆಂದು ನೋಡಿಕೊಂಡು ಅದನ್ನು ಕೊಡುವ ಏರ್ಪಾಡು ಮಾಡಬೇಕೆಂದು ಒಂದು ಅಭಿಪ್ರಾಯ ಅವರು ಹೇಳಿದರು.

ಶ್ರೀ ಎ. ಭೀಮಪ್ಪನಾಯಕ್.—ಆಗ ಅದು ತಸ್ತೀಕ್ ಆಗುವುದಿಲ್ಲ, ಗ್ರ್ಯಾಂಟ್ ಆಗುತ್ತದೆ.

4-30 P.M.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಹೇಳಿದರೂ ಕೂಡ ನಾವು ಈ ಹೊತ್ತೂ ಅವುಗಳಿಗೆಲ್ಲಾ ಇಲ್ಲಿಯತನಕವೂ ಅವುಗಳಿಂದ ಏನೇನು ಆದಾಯ ಸರ್ಕಾರಕ್ಕೆ ಬಂದಿರುತ್ತದೆಯೋ ಆ ಆದಾಯದಿಂದಲೇ ಕೊಡುತ್ತಿದ್ದೇವೆಂದು ಈ ಮಸೂದೆಯಲ್ಲೇ ನಾವು ಹೇಳಿದ್ದೇವೆ. ಈ ಬಾಬಿಗೆ ಇನ್ನೂ ಸ್ವಲ್ಪ ಹೆಚ್ಚಿಗೆ ಎಂದರೆ ಸಾಕಾಗುವಷ್ಟನ್ನಾದರೂ ಕೊಡೋಣ ಎಂದು ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ವಿಚಾರವನ್ನು ಹೇಳಿದ್ದಾರೆ. ಈಗೇನು ಕೆಲ ಕೆಲವು ಇನ್‌ಸ್ಟಿಟ್ಯೂಷನ್‌ಗಳಿಗೆ ಒಂದು ಆದಾಯ ಬರುತ್ತಿದೆಯೋ ಅಂಥರೆ—ಕೆಲವು ಇನ್‌ಸ್ಟಿಟ್ಯೂಷನ್ನುಗಳಿಗೆ ಸಾಕಾಗುವಷ್ಟು ಆದಾಯ ಬರುತ್ತಿದೆ, ಇನ್ನು ಕೆಲವಕ್ಕೆ ಸ್ವಲ್ಪ ಕಡಮೆಯಾಗಿ ಬರುತ್ತದೆ. ಮತ್ತೆ ಕೆಲವು ಇನ್‌ಸ್ಟಿಟ್ಯೂಷನ್‌ಗಳಿಗೆ ಯಾವ ಆದಾಯವೂ ಬರುವುದಿಲ್ಲ. ಅಂಥ ಇನ್‌ಸ್ಟಿಟ್ಯೂಷನ್‌ಗಳೂ ಕೆಲವಿವೆ. ಈರೀತಿಯಾಗಿ ಯಾವ ಯಾವ ಇನ್‌ಸ್ಟಿಟ್ಯೂಷನ್ನಿಗೆ ಆದಾಯವಿದೆ, ಯಾವುದಕ್ಕೆ ಸಾಲದು, ಯಾವಕ್ಕೆ ಉತ್ಪತ್ತಿ ಇಲ್ಲ ಎಂಬ ಅಂಶಗಳನ್ನೆಲ್ಲಾ ಕಂಡುಹಿಡಿದು ಅನಂತರ ಆಯಾ ಸಂಸ್ಥೆಗಳಿಗೆ ತಕ್ಕಷ್ಟು ಗ್ರ್ಯಾಂಟನ್ನು ಸರ್ಕಾರದವರು ಕೊಡುತ್ತಾರೆ ಆದರೆ ಈಗ ಶ್ರೀ ಭೀಮಪ್ಪನಾಯಕರು ಹೇಳತಕ್ಕ ರೀತಿಯಲ್ಲಿ ಇವುಗಳನ್ನೆಲ್ಲಾ ನಡೆಸಿಕೊಂಡು ಹೊಗತಕ್ಕ ಭಾರವು ಇನ್ನುಮೇಲೆ ಸಂಪೂರ್ಣವಾಗಿ ಸರ್ಕಾರದವರಮೇಲೆಯೇ ಬಿದ್ದುಬಿಡುತ್ತದೆಯೇನೋ ಏನೋ ಎನ್ನುವ ಒಂದು ಭಯ ಈಗ ಉಂಟಾಗಿದೆ. ಆದರೆ ಹಾಗೆ ಸರ್ಕಾರದವರು ಈ ಸಂಸ್ಥೆಗಳನ್ನೆಲ್ಲಾ ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿಯನ್ನು ಹೊರುವುದು ಸೂಕ್ತವಲ್ಲವೆಂದು ಹೇಳತಕ್ಕವರ ಪೈಕಿ ನಾನೂ ಕೂಡ ಒಬ್ಬನಾಗಿದ್ದೇನೆ. ಆದರೆ ಈ ಸಂಸ್ಥೆಗಳೆಲ್ಲವೂ ಸಾರ್ವಜನಿಕರ ಪೋಷಣೆಯಿಂದಲೂ ಮತ್ತು ಆಯಾ ಸಂಸ್ಥೆಯ ಭಕ್ತಾದಿಗಳಿಂದ ಅವುಗಳಿಗೆ ಬರತಕ್ಕಂಥಾ ಆದಾಯದಿಂದಲೂ ಅವುಗಳು ಮುಂದುವರೆಯುವಂತೆ ಮಾಡತಕ್ಕದ್ದು ಒಳ್ಳೆಯದು ಮತ್ತು ಸೂಕ್ತವಾದದ್ದು ಎಂದು ಹೇಳುತ್ತೇನೆ. ಉದಾಹರಣೆಗೆ ಈಗ ನಮ್ಮಲ್ಲಿ ಕೆಲವು ಚರ್ಚುಗಳಿವೆ. ಅವುಗಳೆಲ್ಲಾ ತಮ್ಮ ಒಂದು ಪ್ರಚಾರಕಾರ್ಯದಲ್ಲೇ ತಮ್ಮ ಖರ್ಚುವೆಚ್ಚಗಳನ್ನೆಲ್ಲಾ ಪಡೆದುಕೊಂಡು ಮುಂದುವರಿಯುತ್ತಾ ಬಂದಿವೆ. ನಮ್ಮಲ್ಲಿಯೂ ಕೂಡ ಅದೇ ರೀತಿಯಾಗಿ ಪ್ರಚಾರ ಕಾರ್ಯಗಳನ್ನು ಈ ಸಂಸ್ಥೆಗಳು ಕೈಗೊಂಡು, ಅವುಗಳಿಂದ ಬರುವಂಥ ಉತ್ಪತ್ತಿಯಿಂದಲೂ ಮತ್ತು ಆ ಸಂಸ್ಥೆಗಳಿಗೆ ಸಂಬಂಧಪಟ್ಟ ಜನರ ಸಹಕಾರಗಳಿಂದಲೂ ಒಂದು ಫಂಡನ್ನು ಮಾಡಿ ತನ್ಮೂಲಕ ಅವು ಮುಂದುವರಿಯುವಂತೆ ಮಾಡುವುದು ಸೂಕ್ತ. ಆದರೆ ಇದರಲ್ಲಿ ಭಿನ್ನಾಭಿಪ್ರಾಯವಿದೆ. ಅದಕ್ಕೆ ನಾನೀಗ ನನ್ನ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತೇನೆ. ಆದರೆ ಈ ಬಗ್ಗೆ ಈಗಲೇ ಏನನ್ನೂ ಹೇಳುವುದಕ್ಕೆ ಆಗುವುದಿಲ್ಲವಾದ್ದರಿಂದ ನಾವು ಇವುಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ಸರಿಯಲ್ಲ. ಇದೆಲ್ಲವನ್ನೂ ರೈತನ ಹಿತರಕ್ಷಣೆಗಾಗಿ ಮಾಡಲಾಗುತ್ತದೆಯೆಂದು ಹೇಳುವುದು ಸರಿಯಲ್ಲ. ನಮಗೆ ಈ ದಿವಸ ಮುಖ್ಯವಾಗಿ ಬೇಕಾಗಿರುವುದು ಬಾಯಿಬಿಟ್ಟು ಹೇಳುವುದಾದರೆ ರೈತರ ಹಿತ. ಅವರಿಗೀಗ ತಾವು ತಕ್ಷಣ ಪರಿಹಾರ ಕೊಡಬೇಕು. ಆದರೆ ತಾವೇನು ಈಗ ಒಂದು ಭವ್ಯವಾದಂಥ ಭವನವನ್ನು ಅವರ ಏಳಿಗೆಗೇ ಕಟ್ಟುತ್ತಿದ್ದೇವೆಂದು ಒಂದು ಆಶ್ವಾಸನ ಕೊಟ್ಟಿದ್ದೀರೋ.

ಶ್ರೀ ಕಡಿದಾಳ್ ಮಂಜಪ್ಪ.—ನಾನೇನೂ ಅಂಥ ಒಂದು ಆಶ್ವಾಸನವನ್ನು ಯಾರಿಗೂ ಇಲ್ಲಿಯವರೆಗೆ ಕೊಟ್ಟಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ನಾನು ಹೇಳತಕ್ಕಂಥ ಆ ರೈತರುಗಳಾರಿದ್ದಾರೋ ಅವರಿಗೊಂದು ಪರಿಹಾರವನ್ನು ಬೇಗ ತಾವು ಒದಗಿಸದೆ ಹೋದರೆ ಅವರು ಉಳಿಯುವುದೇ ಬಹಳ ಕಷ್ಟವಾಗುತ್ತದೆ. ಅವರು ಇನ್ನು ಬಹಳ ಕಾಲದ ತನಕ ಕಾದಿರುವುದಕ್ಕಾಗುವುದಿಲ್ಲ. ಅವರಿಗೆ ತಾವು ಈ ಒಂದು ಉಪಕಾರವನ್ನು ನಡೆಸಿಕೊಡಲೇಬೇಕಾಗಿದೆ. ಆದರೆ ಈಗ ತಮ್ಮ ಮೇಲೆ ಈ ತಸ್ತೀಕ್ ಮೊಬಲಗನ್ನು ಕೊಡತಕ್ಕಂಥ ಒಂದು ಭಾರ ಬಿದ್ದಿದೆಯೆಂದು ಹೇಳಿ ಆ ರೈತನಮೇಲೆ ಇದರ ವಜೆಯನ್ನು ಹೇರಬೇಡಿ ಎಂಬುದಾಗಿ ನಾನು ಬಹಳ ಒತ್ತಾಯಪೂರ್ವಕವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾವು ಜಮೀನನ್ನು ಕೊಡುತ್ತೇವೆಂದು ಹೇಳಿ ರೈತನಮೇಲೆ ಅನೇಕ ಷರತ್ತುಗಳನ್ನು ಹಾಕಿ ಆತನನ್ನು ತೊಂದರೆಗೆ ಗುರಿಪಡಿಸುವುದು ಸಾಧುವಾದದ್ದಲ್ಲ. ರೈತರಿಗೆ ಜಮೀನನ್ನು ಎಷ್ಟು ಸುಲಭವಾಗಿ ಕೊಡುವುದಕ್ಕೆ ಸಾಧ್ಯವಾದರೆ ಅಷ್ಟೂ ಸುಲಭವಾಗಿ ಕೊಡಲು ಸರ್ಕಾರ ಮುಂದೆ ಬರಬೇಕೆಂದು ಹೇಳುತ್ತೇನೆ. ಹಾಗೆ ಮಾಡದೆ ಹೋದರೆ ಇದರಿಂದ ಅವರ ಅನುಕೂಲಕ್ಕೆ ತಕ್ಕಹಾಗೆ ತಾವು ಇದರಲ್ಲಿ ಯಾವ ಬದಲಾವಣೆಗಳನ್ನೂ

(ಶ್ರೀ ಎಸ್. ಗೋಪಾಲಗೌಡ)

ಮಾಡಿದಂತಾಗುವುದಿಲ್ಲ. ಈ ಮಸೂದೆಯನ್ನು ಇನ್ನೂ ಹೆಚ್ಚು ಪ್ರಗತಿದಾಯಕವಾದ ರೀತಿಯಲ್ಲಿ ತಯಾರಿಸಲು ಅನುಕೂಲವಾಗತಕ್ಕಂಥ ಹಲವು ಸೂಕ್ತ ತಿದ್ದುಪಡಿಗಳನ್ನು ನಾವು ತಂದು ಅದರಂತೆ ಈ ಬಿಲ್ಲನ್ನು ತಿದ್ದುಪಡಿಮಾಡಿ ಪುನಃ ಇದನ್ನು ಬೇಗ ಈ ಸಭೆಯ ಮುಂದೆ ತಂದು, ಈ ಸಭೆ ಮುಗಿಯುವುದರೊಳಗಾಗಿ ಇದನ್ನು ಕಾನೂನನ್ನಾಗಿ ಜಾರಿಗೆ ತರತಕ್ಕಂಥ ಪ್ರಯತ್ನಗಳೆಲ್ಲವನ್ನೂ ನಾವು ಮಾಡಬೇಕಾಗಿದೆ. ಈ ಮಧ್ಯೆ ಅವಧಿಯಲ್ಲಿ ಎಲ್ಲಾ ರೈತರಿಗೂ ಎಂದರೆ, ಇನಾಂದಾರರ ಕೈಕೆಳಗಿರತಕ್ಕಂಥ ರೈತರುಗಳಿಗೇ ಅಲ್ಲ—ಎಲ್ಲಾ ರೈತರುಗಳಿಗೂ ಒಂದು ರಕ್ಷಣೆಯನ್ನು ಕೊಡುವಂಥ ಕೆಲಸವನ್ನು ಸರ್ಕಾರ ನಡೆಸಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ತಾವು ದೇವಾದಾಯವಿರತಕ್ಕಂಥ ಸಂಸ್ಥೆಗಳು 19,702 ಎಂದು ತಿಳಿಸಿದ್ದೀರಿ. 431 ಧರ್ಮಾದಾಯವಿರತಕ್ಕಂಥ ಸಂಸ್ಥೆಗಳಿರುತ್ತವೆಂದು ಹೇಳಿದ್ದೀರಿ. ಆದರೆ ಇಲ್ಲಿ ತಾವು ಹೇಳಿರುವಂಥ 'ಗೇಣೀದಾರರುಗಳೆಲ್ಲರೂ ಬಹುಶಃ ಜಮೀನ್ದಾರರಾಗಿಯೇ ಇರಬಹುದು. ಆದರೆ ತಾವು ಈಗ ಕೊಟ್ಟಿರತಕ್ಕಂಥ ಈ 1,187 ಜನ ಗೇಣಿದಾರರ ಪೈಕಿ ಯಾರಿಗೆ ಕೇರಾ ಜಮೀನಿರುವುದಿಲ್ಲ, ಆ ಪೈಕಿ ಯಾರಿಗೆ ಜಮೀನಿದೆ ಅನ್ನುವ ವಿಷಯಗಳೊಂದೂ ಗೊತ್ತಾಗುತ್ತಿಲ್ಲ. ಈಗ ನಮಗೆ ಈ ಗೇಣೀದಾರರ ಪೈಕಿ ಎಷ್ಟು ಜನರು ಸಂಪೂರ್ಣವಾಗಿ ಈ ಗೇಣಿ ಜಮೀನಿನಮೇಲೆ ಜೀವನ ಮಾಡುತ್ತಿದ್ದಾರೆ, ಎಷ್ಟು ಜನರಿಗೆ ಈ ಗೇಣಿ ಜಮೀನಿನ ಜೊತೆಗೆ ಬೇರೆ ಜಮೀನುಗಳಿವೆ, ಅನ್ನತಕ್ಕಂಥ ಅಂಶಗಳೊಂದೂ ಇದರಿಂದ ಗೊತ್ತಾಗುವುದಿಲ್ಲ. ಆದುದರಿಂದ ತಾವು ಈಗ ಈ ಸಭೆಗೆ ಎಷ್ಟು ಜನರು ಜಮೀನಿಲ್ಲದ ಗೇಣಿದಾರರಿದ್ದಾರೆ, ಕೇವಲ ಮಠದ ಜಮೀನಿಗಾಗಿ ಗೇಣಿಕೊಟ್ಟುಕೊಂಡು ಜೀವನ ಮಾಡತಕ್ಕಂಥವರು ಎಷ್ಟು ಜನರಿದ್ದಾರೆ, ಈ ಗೇಣಿ ಜಮೀನನ್ನು ನೆಪಮಾತ್ರಕ್ಕಿಟ್ಟುಕೊಂಡು ಬಾಕಿ ಸ್ವಂತ ಜಮೀನನ್ನುಳ್ಳವರು ಎಷ್ಟು ಜನರಿದ್ದಾರೆಂಬ ತಪಸೀಲುಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅದು ಸಾಧ್ಯವೇ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಸರಕಾರದವರೇನೂ ಕೆಲಸ ಮಾಡುತ್ತಿಲ್ಲವೆಂದು ನಾವು ಭಾವಿಸೋಣವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನೊದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಹೆಚ್ಚುಕಾಲ ಮತ್ತು ಹೆಚ್ಚು ಜನ ಶಿಬ್ಬಂದಿ ಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇದಕ್ಕಾಗಿಯೇ ತಾವೇನೂ ಒಬ್ಬ ಆಫೀಸರನ್ನು ಪ್ರತ್ಯೇಕವಾಗಿ ನೇಮಿಸಬೇಕಾಗಿಲ್ಲ. ಸರ್ಕಾರದವರಲ್ಲಿ ಈ ಲೆಕ್ಕಗಳೆಲ್ಲಾ ಇದ್ದೇ ಇವೆ. ತಾವು ಪ್ರತಿಯೊಂದು ತಾಲ್ಲೂಕು ಕಛೇರಿಗಳಲ್ಲಿಟ್ಟುಕೊಂಡಿರತಕ್ಕಂಥ ರಿಜಿಸ್ಟರ್ ದಾಖಲೆಗಳನ್ನು ಹಾಜರ್ ಪಡಿಸಬೇಕೆಂದು ಕೇಳಿದರೆ ಆದೇ ಆಗುತ್ತದೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ತಮಗೆ ಬಾಕಿ ಅಂಕಿ ಅಂಶಗಳನ್ನೆಲ್ಲಾ ತರಿಸಿಕೊಳ್ಳಲು ಅವಕಾಶವಿರುವಾಗ ತಾವು ಸ್ವಲ್ಪ ತಮ್ಮ ಮನಸ್ಸಿಗೆ ಈ ವಿಚಾರವನ್ನು ಹಾಕಿಕೊಂಡರೆ ಇದು ಸಾಧ್ಯವಾಗಿಯೇ ಆಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ವಿವರಗಳನ್ನೆಲ್ಲಾ ಅಲ್ಪಕಾಲಾವಧಿಯಲ್ಲಿ ಒದಗಿಸಬೇಕೆಂದರೆ ಬಹಳ ಕಷ್ಟವಿದೆ. ಈ ಗೇಣೀದಾರರುಗಳಿಗೆ ಸಂಬಂಧಪಟ್ಟ ಎಲ್ಲಾ ಅಂಕಿ ಅಂಶಗಳನ್ನೂ ಸಂಗ್ರಹಣೆ ಮಾಡಬೇಕೆಂದರೆ ಹೆಚ್ಚುಕಾಲ ಬೇಕಾಗುತ್ತದೆ......

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅವರು ಹೀಗೆ ಈ ವಿವರಗಳನ್ನು ಏತಕ್ಕಾಗಿ ಕೇಳುತ್ತಿದ್ದಾರೆ ಎಂದರೆ ಎಷ್ಟೋ ಜನರು ಜಮೀನುದಾರರಾಗಿದ್ದರೂ, ಈ ಒಂದು ಕಾರಣದಿಂದ ಅವರು ಇನ್ನೂ ಮತಷ್ಟು ಹೆಚ್ಚಿಗೆ ಜಮೀನುಗಳನ್ನು ಪಡೆಯಲು ಅವಕಾಶವಾಗುತ್ತದೆ, ಜಮೀನಿಲ್ಲದವರಿಗೆ ಜಮೀನೇ ದೊರೆಯುವುದಿಲ್ಲ. ಆದಕಾರಣ ಇದು ಹೀಗಾಗಬಾರದೆಂಬುದಕ್ಕೋಸ್ಕರವಾಗಿ ಈ ವಿವರಗಳನ್ನು ಕೇಳಿದ್ದಾರೆಂದು ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಈ ಗೇಣಿದಾರರುಗಳಿಗೆ ಜಮೀನನ್ನು ಕೊಡಿಸತಕ್ಕ ಸಂದರ್ಭದಲ್ಲಿ ಪಾವತಿ ಮಾಡಬೇಕಾಗಿರತಕ್ಕ ಆ ಒಂದು ಪರಿಹಾರ ದ್ರವ್ಯದ ಮೊಬಲಗೇನಿದೆಯೋ ಅದು ಬಹಳ ಜಾಸ್ತಿಯಾಗಿದೆಯೆಂದು ಸರ್ಕಾರದವರು ಹೇಳುತ್ತಿದ್ದಾರೆ. ಅದರಲ್ಲಿ ಸತ್ಯಾಂಶ ಇದೆ. ಆದರೆ ಈಗ ತಾನೆ ಶ್ರೀಮಾನ್ ನಾಗಪ್ಪಶೆಟ್ಟಿಯವರು ಹೇಳಿದ ಹಾಗೆ ಅನೇಕರು ಈ ಗೇಣಿದಾರರ ಸೋಗಿನಲ್ಲಿ ಮಠದ ಜಮೀನುಗಳನ್ನು ಹೊಡೆದುಕೊಳ್ಳಲು ಅವಕಾಶವಾಗಿದೆ. ಸರ್ಕಾರದವರು ಈ ಅಂಕಿ ಅಂಶಗಳನ್ನೆಲ್ಲಾ ಒದಗಿಸದೆ ಭಾಗದಲ್ಲಿ ಕೇವಲ ಯಾರಾರಿಗೆ ಜಮೀನಿರುವುದಿಲ್ಲವೋ ಅಂಥವರಿಗೆ ಜಮೀನನ್ನು ಒದಗಿಸಬಹುದು—ಇಲ್ಲವಾದರೆ ಈ ಜಮೀನೆಲ್ಲಾ ಅಥವಾ ಬಹುಭಾಗದ ಜಮೀನೆಲ್ಲಾ ಕೇವಲ ಯಾರು ಬಾಯಿಬಡುಕರಿದ್ದಾರೋ, ಯಾರು ಖದೀಮರಿದ್ದಾರೋ, ಅಂದರೆ ಖದೀಂ ರೈತರನ್ನು ನಾನು ಹೇಳುತ್ತಿಲ್ಲ, ಅಂಥವರಿಗೇ ಇದು ಸೇರಿಹೋಗತಕ್ಕದ್ದಾಗಿದೆ. ನಾವು ಇಷ್ಟೆಲ್ಲಾ ಮಾಡಿದ್ದಕ್ಕೆ ಮತ್ತು ಜಮೀನಿಲ್ಲದವನಿಗೆ ಜಮೀನು ದೊರೆಯುವಂತೆ ಮಾಡುತ್ತೇವೆಂದು ದೊಡ್ಡದಾಗಿ ಒಂದು ಪ್ರತಿಪಾದನೆಮಾಡುತ್ತಾ ಇರುವುದಕ್ಕೆ ಕೊನೆಗೆ ಆದದ್ದೇನೆಂದು ನೋಡಿದರೆ "ಹಾವನ್ನು ಕೊಂದು ಹದ್ದಿಗೆ ಹಾಕಿದಂತಾಗಿದೆ"......

Sri Kadidal MANJAPPA.—The Hon'ble Member was a member of the Select Committee. He has signed the Report.

Sri D. DEVARAJA URS.—My signing the Report has nothing to do with my asking for information in regard to genidars and their holdings.

Mr. DEPUTY SPEAKER.—You are perfectly right, but probably the difficulty of the Government is, they may not be able to secure all the information you have asked for within the course of to-day or to-morrow. It is really possible as you say, but it takes some time.

Sri D. DEVARAJA URS.—So that it may facilitate discussion on the Bill. If the Government feel that it is possible to get the information within a reasonable time, let them do so.

Mr. DEPUTY SPEAKER.—That means, we will have to postpone the discussion on the subject till we secure the information.

Sri A. BHEEMAPPA NAIK.—If the information is called for and is to be given, it should be given before the Bill is passed.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಆ ಜಾಯಿಂಟ್ ಸಲೆಕ್ಟ್ ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದಿರಿ. ಅದು ಒಂದು ಸಾರ್ತಿಯಲ್ಲ ಹತ್ತಾವರ್ತಿ ಸಭೆ ಸೇರಿತ್ತು. ಆಗಲೇ ತಾವು ತಮಗೆ ಏನೇನು ಅಂಕಿ ಅಂಶಗಳು ಬೇಕಾಗಿತ್ತೋ ಅವುಗಳನ್ನೆಲ್ಲಾ ಒದಗಿಸಬೇಕೆಂದು ಕೇಳಿದ್ದರೆ ಸರ್ಕಾರದವರು ಸಾಧ್ಯವಾದಮಟ್ಟಿಗೂ ಪ್ರಯತ್ನಮಾಡಿ ಇಲ್ಲಿಯವರೆಗೆ ಅವುಗಳನ್ನೆಲ್ಲಾ ಸಂಗ್ರಹಣೆ ಮಾಡಬಹುದಾಗಿತ್ತು. ತಾವು ಆಗಲೇ ಏಕೆ ಕೇಳಬಾರದಾಗಿತ್ತು?

Mr. DEPUTY SPEAKER.—That does not preclude the members from asking for information.

ಶ್ರೀ ಡಿ. ದೇವರಾಜ ಅರಸ್.—ತಾವು ಈ ಬಗ್ಗೆ ಏನು ಹೇಳಿದ್ದೀರೋ ಅದನ್ನು ನಾನೇನೂ ಮಾಡದೆ ಕೈಬಿಟ್ಟಿಲ್ಲ. ಆದರೆ ತಮಗೆ ಆ ವಿಚಾರ ಗೊತ್ತಿಲ್ಲದಿದ್ದರೆ ನಾನೇನುಮಾಡಲಿ. ನಾನು ತಾವು ಹೇಳಿದಂತೆ ಆ ಸಮಿತಿಯಲ್ಲಿ ಸದಸ್ಯನಾಗಿದ್ದುದೇನೋ ನಿಜ. ಆಗಲೂ ನಾನು ಈ ವಿವರಗಳೆಲ್ಲಾ ಬೇಕೆಂದು ಕೇಳಿಯೇ ಕೇಳಿದ್ದೆನೆ ಆಗಲೂ ಸಹ ಇದೇ ರೀತಿಯಾಗಿ ಈ ವಿವರಗಳನ್ನೆಲ್ಲಾ ತರಿಸುವುದಕ್ಕೆ ಸಾಧ್ಯವೇ ಇಲ್ಲ ಎಂದು ಉತ್ತರ ಕೊಟ್ಟಿದ್ದರು.

ಶ್ರೀ ಕಡಿದಾಳ್ ಮಂಜಪ್ಪ.—ನಾವು ಹೀಗೆ ಯಾವುದಾದರೊಂದು ಕಾನೂನನ್ನು ಮಾಡತಕ್ಕಂಥ ಸಂದರ್ಭದಲ್ಲಿ ಇದರಿಂದ ಎಷ್ಟು ಜನರಿಗೆ ತೊಂದರೆಯಾಗುತ್ತದೆ, ಎಷ್ಟು ಜನರಿಗೆ ಅನುಕೂಲವಾಗುತ್ತದೆ, ಎಷ್ಟು ಜನರಿಗೆ ಲಾಭವಾಗುತ್ತದೆ, ಎಷ್ಟು ಜನರಿಗೆ ನಷ್ಟವಾಗುತ್ತದೆ, ಎಷ್ಟು ಜನಗಳಿಗೆ ತೊಂದರೆಯಾಗುವುದಿಲ್ಲ ಇತ್ಯಾದಿ ಅಂಕಿ ಅಂಶಗಳನ್ನೆಲ್ಲಾ ಸಂಗ್ರಹಣೆಮಾಡುವುದಕ್ಕೆ ಸರ್ಕಾರದವರಿಗೆ ಸಾಧ್ಯವಿಲ್ಲ. ತಮಗೆ ಒಂದು ಉದಾಹರಣೆಗಾಗಿ ಹೇಳಬೇಕೆಂದರೆ—ಈ ಹಿಂದೆ ನಾವು ಹೌಸ್‌ರೆಂಟ್ ಕಂಟ್ರೋಲ್ ಎಂಬ ಒಂದು ಆಕ್ಟನ್ನು ಮಾಡಿದೆವು, ಅದನ್ನು ಆಕ್ಟನ್ನಾಗಿಮಾಡತಕ್ಕ ಕಾಲದಲ್ಲಿ—ಎಷ್ಟು ಜನರಿಗೆ ಮನೆಯಿದೆ, ಎಷ್ಟು ಜನಗಳಿಗೆ ಮನೆಯಿಲ್ಲ, ಇದರಿಂದ ಯಾರಾರಿಗೆ ತೊಂದರೆ, ಯಾರಾರಿಗೆ ಅನುಕೂಲವಾಗುತ್ತದೆ ಎಂಬತಕ್ಕ ಅಂಕಿ ಅಂಶಗಳನ್ನೆಲ್ಲಾ ಸಂಗ್ರಹಣ ಮಾಡಿಕೊಂಡು ಅದನ್ನು ಮಾಡುವುದಕ್ಕೆ ಹೋಗಿದ್ದರೆ ಅದು ಖಂಡಿತ ಸಾಧ್ಯವಾಗುತ್ತಲೇ ಇರಲಿಲ್ಲ. ಅಲ್ಲದೆ ಯಾವ ಕಾಲಕ್ಕೆ ಏನು ಕೆಲಸವಾಗಬೇಕೋ ಅದು ಆಗುವುದು ನಿಂತು ಹೋಗುತ್ತದೆ. ಇವುಗಳನ್ನೆಲ್ಲಾ ಒದಗಿಸುವುದಕ್ಕೆ ಆಗುವುದಿಲ್ಲವೆಂದಲ್ಲ. ಆದರೆ ಅದರಿಂದ ಅಷ್ಟೇನೂ ಪ್ರಯೋಜನವಿಲ್ಲ. ಹೆಚ್ಚಿನಶ್ರಮಕ್ಕೆ ಕಾರಣ ಅಷ್ಟೇನೆ. ಆದುದರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಮಾತ್ರ ಒದಗಿಸಲಾಗುತ್ತದೆಂದು ಹೇಳಿದ್ದೆನು.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಶ್ರೀಮಾನ್ ದೇವರಾಜ ಅರಸಿನವರು ಹೇಳಿದಹಾಗೆ ಇನಾಮ್‌ದಾರರನ್ನು ತೆಗೆದು ಹಾಕುವುದು ಸರ್ಕಾರದ ಉದ್ದೇಶವೇ ಹೊರತು ದೇವಸ್ಥಾನಗಳು ಇರಬಾರದೆದಬುದಲ್ಲ. ಇನಾಮ್ ಹಕ್ಕು ಹೋಗಿ ಟೆನೆಂಟುಗಳಿಗೆ ಜಮೀನಿನ ಮೇಲಿನ ಹಕ್ಕುಗಳನ್ನು ಕೊಡುವುದೇನೂ ವಿವಾದಾಸ್ಪದವಾದ ಪ್ರಶ್ನೆಯಲ್ಲ. ಯಾರು ಜಮೀನನ್ನು ವ್ಯವಸಾಯ ಮಾಡಿಕೊಂಡು ಅದನ್ನು ಅನುಭವಿಸುತ್ತಿದ್ದಾರೋ ಅವರಿಗೆ ಆ ಜಮೀನು ಸೇರುವುದು ನ್ಯಾಯ. ಅವರಿಗೆ ಬೇರೆ ಜಮೀನಿದೆ ಎಂದ ಮಾತ್ರಕ್ಕೇ ಅವರು ಈ ಜಮೀನನ್ನು ಪಡೆಯುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅವರಿಗೆ ಬೇರೆ ಜಮೀನಿರಲಿ ಇಲ್ಲದೇಯಿರಲಿ, ಆ ಜಮೀನನ್ನು ಅವರು ಮಾಡುತ್ತಿದ್ದಾರೆ. ಅವರಿಗೆ ಎಂದರೆ ಖದೀಮ್ ಟೆನೆಂಟುಗಳಿಗೆ ಹೆಚ್ಚಾಗಿ ಜಮೀನಿದ್ದರೂ ಕೂಡ ಅವರಿಗೆ ಈ ಹಕ್ಕನ್ನು ಕೊಡಬೇಕಾಗಿದೆ. ಅವರು ಈರೀತಿ ಹೇಳುವುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಶ್ರೀಮಾನ್ ದೇವರಾಜ ಅರಸಿನವರು ಕೇಳಿದ ಎಲ್ಲ ಅಂಕಿ ಅಂಶಗಳನ್ನೂ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ತಸ್ದಿಕ್ ರೂಪದಲ್ಲಿ ಹಣವನ್ನೆಷ್ಟು ಕೊಡಬೇಕಾಗುತ್ತದೆ, ಕಂದಾಯದ ರೂಪದಲ್ಲಿಯೂ ಜಮೀನನ್ನು ಮಾರಾಟ ಮಾಡುವುದರಲ್ಲಿಯೂ ಎಷ್ಟು ಹಣ ಸರ್ಕಾರಕ್ಕೆ ಬರುತ್ತದೆ, ಎಂಬುದನ್ನು ತಿಳಿಸಿದರೆ ಒಳ್ಳೆಯದು. ಮತ್ತು ಅರ್ಚಕರು ಎಲ್ಲರೂ ಈ ಕಾನೂನಿನ ಪ್ರಕಾರ ಜಮೀನಿನ ಗೇಣಿದಾರರಾಗುವುದಿಲ್ಲವೆಂದು ಮಂತ್ರಿಗಳು ಹೇಳಿದ್ದಾರೆ. ಅರ್ಚಕರಿಗೆ ಅಲ್ಪಸ್ವಲ್ಪ ಜಮೀನಿದ್ದು ಈ ಜಮೀನನ್ನು ವ್ಯವಸಾಯ ಮಾಡಿಕೊಂಡಿದ್ದು ಗೇಣೀದಾರರು ಅನ್ನುವುದರಲ್ಲಿ ಬಾರದೇಯಿರುವವರು ಎಷ್ಟು ಜನರಿದ್ದಾರೆ ಎಂಬ ಅಂಕಿ ಅಂಶಗಳನ್ನು ಒದಗಿಸಿದರೆ ಮುಂದೆ ಚರ್ಚೆಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಮಾನ್ಯ ಮಂತ್ರಿಗಳು ಈ ವಿಷಯವಾಗಿ ಮಾತನಾಡುತ್ತಾ ಕ್ರಿಮಿನಲ್ ಕೋಡ್‌ಗೆ ಹೋಲಿಸಿದರು. ಇದು ಸರಿಯಲ್ಲ. ಕಾನೂನು ಉಲ್ಲಂಘನೆ ಮಾಡಿದರೆ ಶಿಕ್ಷೆಗೊಳಗಾಗುತ್ತಾರೆಂದು ಹೇಳಿದರು. ಇನ್ನೊಂದು ವಿಷಯ. ವಿವರಗಳನ್ನು ಕಂಡುಹಿಡಿಯುವುದು ಸಾಧ್ಯವಿಲ್ಲವೆಂದು ಹೇಳಿದರು. ಇಷ್ಟಿಷ್ಟು ಜಮೀನಿದೆ ಎಂಬುದನ್ನು ತಿಳಿಯುವುದು ಸಾಧ್ಯವೆಂದು ಹೇಳುತ್ತೇನೆ. ಇಷ್ಟೆಕರೆ ಜಮೀನಿದೆಯೆಂಬುದು ಗೊತ್ತಿದೆ, ಟೆನೆಂಟುಗಳೆಷ್ಟಿದ್ದಾರೆಂಬುದು ಗೊತ್ತು. ಇಷ್ಟಿದ್ದರೂ ಈ ವಿವರಗಳನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲವೆಂದು ಹೇಳಿದರು. ಇದು ಅವರಲ್ಲಿ ದಕ್ಷತೆಯಿಲ್ಲವೆಂಬುದನ್ನು ತೋರಿಸುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—On a point of order, Sir. ಈ ಸಂದರ್ಭದಲ್ಲಿ ವಿಷಯಗಳನ್ನು ಕೇಳಬಹುದೇ ಹೊರತು ಮಂತ್ರಿಗಳು ಕೊಟ್ಟ ಉತ್ತರಗಳ ಮೇಲೆ ಟೀಕೆ ಮಾಡುವುದಕ್ಕೆ ಇದು ಸಮಯವಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಮಾನ್ಯ ಸದಸ್ಯರು ಸಾವಧಾನದಿಂದ ಪರಿಶೀಲನೆಮಾಡಬೇಕು. ಸಾವಿರಾರು ಜನ ರೈತರಿರುವಾಗ, ಒಬ್ಬೊಬ್ಬರಿಗೆ ಎಷ್ಟೆಷ್ಟು ಜಮೀನಿದೆ, ಅವರ ಆಸ್ತಿ ಏನೇನಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಬೇಕಾದರೆ ಸರ್ಕಾರಕ್ಕೆ ಎಷ್ಟು ಕಷ್ಟ ಎಂಬುದನ್ನು ಯೋಚನೆ ಮಾಡಬೇಕು.

ಉಪಾಧ್ಯಕ್ಷರು:—ಇದಕ್ಕೆ ಕಾಲ ಹಿಡಿಯುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ರಿಜಿಸ್ಟರಿನಲ್ಲಿ ಕೆಲವು ಅಂಕಿ ಅಂಶಗಳು ಸಿಕ್ಕುತ್ತವೆ. ಈ ರಿಜಿಸ್ಟರಿನಲ್ಲಿ ಯಾವ ಯಾವ ರೈತರಿಗೆ ಎಷ್ಟೆಷ್ಟು ಜಮೀನಿರುತ್ತದೆ, ಬೇರೆ ಜಮೀನು ಎಷ್ಟು ಎಂಬ ವಿವರಗಳು ನಮೂದಾಗಿರುವುದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಮಸೂದೆ ಬಂದು ಎರಡು ವರ್ಷವಾಯಿತು. ಇನಾಮ್ ಗ್ರಾಮಗಳಲ್ಲಿರುವ ರೈತರು ಇದು ಎಂದಿಗೆ ಕಾನೂನಾಗಿ ಜಾರಿಗೆ ಬಂದೀತೋ ಎಂದು ಕಾತರರಾಗಿ ನೋಡುತ್ತಿದ್ದಾರೆ. ಸೆಲೆಕ್ಟ್ ಕಮಿಟಿ ನೇಮಕವಾಗಿ ಅದರಿಂದ ಈ ಮಸೂದೆ ಪರಿಶೀಲನೆಯಾಗಿ ಬಂದರೂ ಕೂಡ, ಇನ್ನೂ ಇಷ್ಟು ಚರ್ಚೆ ನಡೆಯುತ್ತಿದೆ. ಹಿಂದೆ ನಡೆದ ಚರ್ಚೆಯಲ್ಲಿ ಇದು ನಾಳೆ ನಾಳಿದ್ದರಲ್ಲ ಕಾನೂನಾಗಬಹುದೆಂಬ ಭಾವನೆ ಸದಸ್ಯರಲ್ಲಿತ್ತು. ಆದರೆ ಈ ಹೊತ್ತಿನ ರೀತಿಯನ್ನು ನೋಡಿದರೆ ಹಾಗಾಗುವುದಿಲ್ಲವೆಂದು ಕಾಣುತ್ತದೆ.

ಉಪಾಧ್ಯಕ್ಷರು.—ಒಂದು ಕಾನೂನಾಗಬೇಕಾದರೆ ಅದರ ಮೇಲೆ ಮಾತನಾಡುವುದಕ್ಕೆ ಸದಸ್ಯರಿಗೆ ಅಧಿಕಾರವಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ರೀತಿ ಮಾತನಾಡಬಾರದೆಂದಲ್ಲ ; ಆದಷ್ಟು ಜಾಗ್ರತೆ ಈ ಮಸೂದೆಯನ್ನು ಅಂಗೀಕಾರಮಾಡಿ, ಕಾನೂನುಮಾಡಿ ಜಾರಿಗೆ ತರಬೇಕೆಂದು ನಾನು ಹೇಳುವುದು.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಮಸೂದೆ 1950 ರಿಂದಲೂ ನಮ್ಮ ಸಭೆಯ ಮುಂದೆ ಬರುತ್ತಿದೆ. ನಮ್ಮ ಒಂದು ಆಕಾಂಕ್ಷೆಯೇನೆಂದರೆ, ಆದಷ್ಟು ಜಾಗ್ರತೆ ಇದು ಅಂಗೀಕೃತವಾಗಿ ಜನರಿಗೆ ಅನುಕೂಲವಾಗಲೆಂಬುದು. ಆದರೆ ಇದು ನಮ್ಮ ಕಾಂಗ್ರೆಸ್ ಸದಸ್ಯರಿಂದ ಅನೇಕ ರೀತಿಯಲ್ಲಿ ಹಿಂದೆ ಹೋಗುತ್ತಿದೆ. ಮೊದಲು ತಂದ ಬಿಲ್ಲಿನಲ್ಲಿ ಬದಲಾವಣೆ ಮಾಡಿ ಪುನಃ ಬೇರೆ ತೆಗೆದುಕೊಂಡು ಬಂದರು, ಅದು ಸೆಲೆಕ್ಟ್ ಕಮಿಟಿಯಲ್ಲಿ ಚರ್ಚೆಯಾಗಿದೆ. ಇದರಲ್ಲಿ ಮುಖ್ಯ ಉದ್ದೇಶವೇನೆಂದರೆ ಟೆನೆನ್ಸಿ ಬಿಲ್ಲಿಗೂ, ಇನಾಮ್ ಬಿಲ್ಲಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇರಬಾರದು, ಸಾಧ್ಯವಾದ ಮಟ್ಟಿಗೂ ಭೂಸುಧಾರಣೆ ಒಂದೇ ರೀತಿಯಾಗಿರಬೇಕೆಂಬುದು. ಈ ಧ್ಯೇಯವನ್ನಿಟ್ಟುಕೊಂಡು, ಅಲ್ಲದೆ ಯಾವ ರೀತಿಯಲ್ಲಿಯೂ discrimination ಆಗಬಾರದೆಂದು ಕಾನೂನಿನ ದೃಷ್ಟಿಯಿಂದ ನೋಡಿ ತಿದ್ದುಪಡಿ ಮಾಡಿದರು. ಈಗ ನೋಡಿದರೆ, ಒಂದು ಸಂಸ್ಥೆಯಿಂದ ಜಮೀನನ್ನು ತೆಗೆದುಕೊಂಡರೆ, ಅದನ್ನು maintain ಮಾಡುವಷ್ಟು ಹಣವನ್ನು ಕೊಡಬೇಕೆಂಬ ವಾದವಿದೆ. ಕೆಲವಕ್ಕೆ ಜಮೀನಿರಬಹುದು, ಕೆಲವಕ್ಕೆ ಇಲ್ಲದೇಯಿರಬಹುದು. ಇಲ್ಲದೇ ಯಿರುವುದನ್ನು ಸರ್ಕಾರ maintain ಮಾಡಬೇಕಾಗುತ್ತದೆ. ಎಷ್ಟು ಉತ್ಪತ್ತಿ ಬರುತ್ತದೆ ಎಂಬುದನ್ನು ನೀವು ಗಣನೆಗೆ ತೆಗೆದುಕೊಂಡಿಲ್ಲ. ಯಾವ ಸಂಸ್ಥೆಯನ್ನೇ ಅಗಲಿ ಪುನರುಜ್ಜೀವನಗೊಳಿಸುವುದಕ್ಕಾಗಿ ಈ ಮಸೂದೆಯನ್ನು ತಂದಿಲ್ಲ. ಹಿಡುವಳಿಯ ವಿಷಯದಲ್ಲಿ ತಿದ್ದುಪಡಿಮಾಡುವುದಕ್ಕೆ ಮಾತ್ರ ತಂದಿರುವುದು. ಇದಕ್ಕೆ ಸಂಬಂಧಪಟ್ಟಹಾಗೆ ಮಾತ್ರ ಮಾತನಾಡುವುದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಹಾಗಿಲ್ಲದೆ ನೀವು ಬೇರೆ ವಿಚಾರವನ್ನು ತೆಗೆದುಕೊಳ್ಳಬೇಕೆಂದರೆ, ಅದಕ್ಕೆ ಬೇರೆ ಮಸೂದೆಯನ್ನು ತರಬಹುದಾಗಿತ್ತು. ಇದಕ್ಕೆ ಸಂಬಂಧಪಟ್ಟ ಸಂಸ್ಥೆಗಳನ್ನೆಲ್ಲಾ ಪುನರುಜ್ಜೀವನಗೊಳಿಸಿ ನಡೆಸುವುದಕ್ಕೆ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದಿಲ್ಲ.

ಅಲ್ಲದೆ, ಇದರಲ್ಲಿ ಬರತಕ್ಕ ಉತ್ಪತ್ತಿ, ಇದಕ್ಕಾಗಿ ಕೊಡತಕ್ಕ ಹಣ ಎರಡರಲ್ಲಿಯೂ ಸರ್ಕಾರದ ಖರ್ಚು ಕಳೆದು ಅಲ್ಲಲ್ಲಿಗೆ ನೇರವಾಗಬೇಕೆಂದು ಒತ್ತಿ ಹೇಳಿದ್ದೇವೆ. ಅದನ್ನು ಬಿಟ್ಟು ಈ ಕಾನೂನನ್ನು ನಾವು ಮಾಡುವುದು ಸರ್ಕಾರದ ಖಜಾನೆಯಿಂದ ಇನ್ನೂ ಹೆಚ್ಚು ಹಣವನ್ನು ಖರ್ಚುಮಾಡಬೇಕೆಂಬ ಉದ್ದೇಶದಿಂದಲ್ಲ. ಎಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕಾಗುತ್ತದೆಯೋ ಅಷ್ಟನ್ನು ರೈತರಿಂದ ವಸೂಲು ಮಾಡಬೇಕೆಂದು ಈ ಸುಧಾರಣೆಯನ್ನು ತಂದಿದ್ದೇವೆ. ಆದಷ್ಟು ಜಾಗ್ರತೆ ಇದು ಆಗಲೆಂಬುದು ನಮ್ಮ ಧ್ಯೇಯ.

ಇನ್ನೊಂದು ವಿಷಯವೇನೆಂದರೆ, ಈ ಜಮೀನುಗಳಲ್ಲಿ ಎಷ್ಟು ಜನ ಟೆನೆಂಟುಗಳಿದ್ದಾರೆ, ಅವರಿಗೆ ಎಷ್ಟೆಷ್ಟು ಸ್ವತ್ತಿದೆ, ಇದರಲ್ಲಿ ಇನಾಮ್ ಎಷ್ಟು, ಕಂದಾಯದ ಸ್ವತ್ತೆಷ್ಟು ಎಂದು ಕೇಳುತ್ತಾ ಹೋದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಆ ವಿಚಾರ ಬಂದಾಗ, ಒಂದು ಜಮೀನು ಹಿಡುವಳಿಯಲ್ಲಿ ಒಂದು ಸಂಸಾರಕ್ಕೆ ಇಷ್ಟೇ ಜಮೀನಿರಬೇಕೆಂದು ಕಾನೂನು ತಂದರೆ, ಆ ಕಾನೂನು ಇವರಿಗೂ ಅನ್ವಯಿಸುತ್ತದೆ, ಹೆಚ್ಚಾಗಿದ್ದರೆ ಅವರಿಂದ ತೆಗೆದುಕೊಳ್ಳಬಹುದು. ಈ ಕಾನೂನು ಸಂಸ್ಥೆಗಳಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಹಿಡುವಳಿಯಲ್ಲಿ ಎಷ್ಟೆಷ್ಟು ಜಮೀನಿಟ್ಟುಕೊಂಡಿದ್ದಾರೆಂದು ನೋಡುವುದಕ್ಕಲ್ಲ. ಒಂದು ವೇಳೆ ಯಾರಾದರೂ ಹೆಚ್ಚು ಸಾಗುವಳಿ ಮಾಡುತ್ತಿದ್ದರೆ ಅದನ್ನು ತಪ್ಪಿಸಬೇಕಾದರೆ, ಬಾಕಿಯವರಿಗೂ ತಪ್ಪಿಸಿದರೆ ಅವನಿಗೆ ತಪ್ಪಿಸಬಹುದೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಇವನಿಗೆ ಮಾತ್ರ ಕೊಡಬಾರದೆಂದು ಹೇಳುವುದು ಸರಿಯಲ್ಲ. ಈಗ ಖದೀಮ್ ಟೆನೆಂಟ್, ಪರ್ಮನೆಂಟ್ ಟೆನೆಂಟ್, ಟೆನೆಂಟ್-ಅಟ್-ವಿಲ್ ಯಾರು ಹಿಡುವಳಿದಾರನಾಗಿರುತ್ತಾನೋ ಅವನಿಂದ ಆಯಾ ದರದಮೇಲೆ ನಿಷ್ಕರ್ಷೆ ಮಾಡಿರುವ ಹಣವನ್ನು ಪಡೆದು ಜಮೀನು ಕೊಡಬೇಕು.

ಸೆಲೆಕ್ಟ್ ಕಮಿಟಿಯ ಅಭಿಪ್ರಾಯದ ಪ್ರಕಾರ ಗೇಣಿಯಲ್ಲಿ ಒಂದು ವ್ಯತ್ಯಾಸವಾಗಿದೆ. ಅದೇನೆಂದರೆ, 27ನೆಯ ಕ್ಲಾಜಿನ ಪ್ರಕಾರ, ಖದೀಮ್ ಟೆನೆಂಟಿಗೆ ಜಮೀನು ಖಾಯಂ ಆಗುತ್ತದೆ. ಪರ್ಮನೆಂಟ್ ಟೆನೆಂಟಿಗೆ ಕಂದಾಯದ ಇಪ್ಪತ್ತರಷ್ಟು ಹಾಕಬೇಕಾಗುತ್ತದೆ, ಟೆನೆಂಟ್ಸ್ ಅಟ್ ವಿಲ್ ಕಂದಾಯದ 25ರಷ್ಟು ಹಣಕೊಟ್ಟು ಜಮೀನನ್ನು ತಾನು ಮಾಡಿಕೊಳ್ಳಬಹುದು. ಅಥವಾ 33⅓ ರಷ್ಟು ಎಂದರೆ ಸ್ವಲ್ಪ ವ್ಯತ್ಯಾಸವಿದೆ. ಸೆಲೆಕ್ಟ್ ಕಮಿಟಿಯ ಈ ಅಭಿಪ್ರಾಯ ಸರಿಯಾಗಿ ವರದಿಯಾಗಿಲ್ಲ. ನನ್ನ ಅಭಿಪ್ರಾಯ, ಹೀಗೆ 33⅓ ಎಂದು ಸೇರಿಸಬೇಕಾದರೆ, ಏನೋ ಇದರಲ್ಲಿ ವ್ಯತ್ಯಾಸವಿರಬೇಕು. 25ರಷ್ಟು ಎನ್ನುವುದನ್ನು 30 ರಷ್ಟು ಎಂದು ಮಾಡಬಹುದಾಗಿತ್ತು, ಅಥವಾ 40 ರಷ್ಟು ಎಂದು ಮಾಡಬಹುದಾಗಿತ್ತು. ಹಾಗಿಲ್ಲದೆ 33 1/3 ರಷ್ಟು ಎಂದರೆ, ಇದರಲ್ಲಿ ಏನೋ ವ್ಯತ್ಯಾಸವಿದೆ. ಆದುದರಿಂದ ಇದನ್ನು ತೆಗೆದುಹಾಕಿ 25ರಷ್ಟು ಎಂದು ಒಂದನ್ನೇ ಹಾಕಿದರೆ ಸಾಕೆಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮೂರನೆಯ ಒಂದು ಭಾಗ ಎಂದು ಹೇಳುವುದಕ್ಕೆ ಹಾಗೆ ಹೇಳಿದೆ.

ಶ್ರೀ ಬಿ. ಹುಚ್ಚೇಗೌಡ.—ಇಷ್ಟು ಸಲ, 33 1/3 times ಎಂದಿದೆ. ಆದುದರಿಂದ ಇದರಲ್ಲಿ ಏನೋ

ವ್ಯತ್ಯಾಸವಿದೆ ಎಂದು ಕಾಣುತ್ತದೆ. ಆದಕಾರಣ ಇದನ್ನು ತೆಗೆದುಹಾಕಿ. ಆಗ 'whichever is more' ಎಂದಿರುವುದರ ಆವಶ್ಯಕತೆಯೂ ಇರುವುದಿಲ್ಲ.

ಈಗ ಈ ಸಭೆಯು ಮುಂದೆ ಬಂದಿರುವ ಮಸೂದೆಯನ್ನು ಹಿಂದೆ ಮುಂದೆ ಓಡಾಡಿಸುವುದು ಅಥವಾ ಇದಕ್ಕೆ ಅಡ್ಡ ಬರುವುದು ಸರಿಯಲ್ಲ. ಆದಷ್ಟು ಜಾಗ್ರತೆ ಇದನ್ನು ಸಭೆಯಲ್ಲಿ ಪಾಸುಮಾಡಿ ಇದರ ಹಿಂದಿನ ವ್ಯಕ್ತಿ ಸಂಬಂಧವಾದ ಇನಾಮ್ ರದ್ದಿಯಾತಿ ಬಿಲ್ಲಿನ ಜೊತೆಗೆ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೋರುತ್ತೇನೆ.

MR. DEPUTY SPEAKER.—The House will now rise and meet to-morrow at Twelve of the Clock.

The House adjourned at Five of the Clock to meet again at Twelve of the Clock on Thursday, the 24th February 1955.

WD 4508—GPB—550—22-3-55